21 April 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸಸಿಗಳಿಗೆ ನೀರು,ಗೊಬ್ಬರ ಹಾಕಿದರೆ ಹೇಗೆ ಒಳ್ಳೆಯ ಗುಣಮಟ್ಟದ ಹೂ,ಹಣ್ಣು ಕೊಡುತ್ತದೆಯೋ, ಹಾಗೆಯೇ ನಮ್ಮಲ್ಲಿ ಬಿತ್ತಿದ ಗುಣಮಟ್ಟದ ಆಲೋಚನೆಗಳು ಕೂಡ!

-ಸ್ನೇಹಾ ಆನಂದ್

info.varthaman@gmail.com



ಏ.30ರಂದು ಬಿಳಿಗಿರಿರಂಗನ ರಥೋತ್ಸವ — ಪುಟ ಸಂ. 2



ಏ.23ರಂದು ಜೆಎಸ್‌ಎಸ್ ಸಂಸ್ಥೆಗಳ ನೂತನ ಕಟ್ಟಡಗಳ ಭೂಮಿ ಪೂಜೆ — ಪುಟ ಸಂ. 3



ರಾಜ್ಯ ಸರ್ಕಾರ ಇಡೀ ರಾಜ್ಯದ ಜನರನ್ನು ಸಂಕಷ್ಟದಲ್ಲಿರಿಸಿದೆ — ಪುಟ ಸಂ. 4


9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 151 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಶಾಸಕ ಹ್ಯಾರಿಸ್‌ಗೆ ಇಡಿ ಶಾಕ್

## ಬಿಟ್‌ಕಾಯಿನ್ ಹಗರಣ: ಶ್ರೀಕಿ ಜೊತೆ ಹಣಕಾಸು ವಹಿವಾಟು ಹಿನ್ನೆಲೆ

## ಹ್ಯಾರಿಸ್, ಪುತ್ರ ನಲಪಾಡ್ ಸೇರಿದಂತೆ 17 ಸ್ಥಳಗಳ ಮೇಲೆ ದಾಳಿ



**ಬೆಂಗಳೂರು:** ಕಾಂಗ್ರೆಸ್ ಶಾಸಕ ಎನ್.ಎ.ಹ್ಯಾರಿಸ್‌ಗೆ ಇ.ಡಿ ಶಾಕ್ ಕೊಟ್ಟಿದೆ. ಶಾಸಕರ ನಿವಾಸ, ಕಚೇರಿ ಸೇರಿದಂತೆ 17 ಸ್ಥಳಗಳ ಮೇಲೆ ಸೋಮವಾರ ಬೆಳ್ಳಂಬೆಳಗ್ಗೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಅಪಾರ ಪ್ರಮಾಣದ ದಾಖಲೆಗಳನ್ನು ವಶಕ್ಕೆ ಪಡೆದಿದ್ದು, ಅವುಗಳ ಪರಿಶೀಲನೆ ನಡೆಸಿದ್ದಾರೆ.

ಬಿಡಿಎ ಅಧ್ಯಕ್ಷರೂ ಆದ ಹ್ಯಾರಿಸ್, ಅವರ ಪುತ್ರ ಮೊಹಮ್ಮದ್ ನಲಪಾಡ್ ಸೇರಿದಂತೆ ಇಬ್ಬರು ಪುತ್ರರ ಮನೆ ಮೇಲೆ ದಾಳಿ ಮಾಡಿ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಲಾಗಿದೆ. ಬಿಟ್‌ಕಾಯಿನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ದಾಳಿ ನಡೆದಿದೆ ಎನ್ನಲಾಗಿದೆ.

ಬಿಟ್‌ಕಾಯಿನ್ ಅಕ್ರಮ ವಹಿವಾಟು ಪ್ರಕರಣದ ಪ್ರಮುಖ ಆರೋಪಿ ಶ್ರೀಕೃಷ್ಣ ರಮೇಶ್ ಉರುಫ್ ಶ್ರೀಕಿ ಜತೆ ಹಣಕಾಸು ವಹಿವಾಟು ನಡೆಸಿರುವ ಸಂಬಂಧ ಎನ್.ಎ.ಹ್ಯಾರಿಸ್ ಮತ್ತಿತರರ ನಿವಾಸಗಳ ಮೇಲೆ ದಾಳಿ ನಡೆಸಿದೆ. ಇ.ಡಿ ಬೆಂಗಳೂರು ವಲಯದ 100ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಸಿಬ್ಬಂದಿ ನಲಪಾಡ್, ಅವರ ತಂದೆ ಎನ್.ಎ.ಹ್ಯಾರಿಸ್ ಅವರ ಶಾಂತಿನಗರದ ನಿವಾಸ, ಬೆಂಗಳೂರಿನ ಗರುಡಾ ಮಾಲ್ ಹಿಂಭಾಗದಲ್ಲಿರುವ ಮನೆಯ ಸೇರಿದಂತೆ 17 ಕಡೆ ದಾಳಿ ನಡೆಸಿದ್ದಾರೆ.

ಬಿಟ್‌ಕಾಯಿನ್ ಪ್ರಕರಣ ಪತ್ತೆಯಾಗುವುದಕ್ಕೂ ಮೊದಲ ಆರು ವರ್ಷಗಳ ಅವಧಿಯಲ್ಲಿ ನಲಪಾಡ್ ಮತ್ತು ಶ್ರೀಕಿ ಮಧ್ಯೆ ನಿರಂತರ ಹಣಕಾಸು ವ್ಯವಹಾರ ನಡೆದಿದೆ. ಈ ಅವಧಿಯಲ್ಲಿ ಒಟ್ಟು 4.65 ಕೋಟಿ ಹಣ ಕೈಬದಲಾಗಿದೆ. ಬಿಟ್‌ಕಾಯಿನ್ ವಹಿವಾಟಗೂ ಇದಕ್ಕೂ ಸಂಬಂಧವಿದೆಯೇ ಅಥವಾ ಇದು ಬೇರೆ ಅಕ್ರಮ ವಹಿವಾಟೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ ಎಂದು ಇ.ಡಿ ಮೂಲಗಳು ತಿಳಿಸಿವೆ

ಶಾಸಕ ಹ್ಯಾರಿಸ್ ಪುತ್ರರಾದ ಮೊಹಮ್ಮದ್ ಹ್ಯಾರಿಸ್ ನಲಪಾಡ್ ಮತ್ತು ಒಮರ್ ಫಾರೂಕ್ ನಲಪಾಡ್ ಮತ್ತು ಶ್ರೀಕೃಷ್ಣ ರಮೇಶ್ ಅಲಿಯಾಸ್ ಶ್ರೀಕಿ ಎಂಬ ಕ್ರಿಪ್ಟೋ ಹ್ಯಾಕರ್ ಅವರ ನಿವಾಸಗಳು ಸೇರಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇಡಿ ಅಧಿಕಾರಿಗಳು ದಾಖಲೆ ಪರಿಶೀಲನೆ ನಡೆಸುತ್ತಿದ್ದಾರೆ. ಬಿಟ್ ಕಾಯಿನ್ ಹಗರಣದ ಆರೋಪಿಗಳ ಜೊತೆಗೆ ಯಾವ ರೀತಿಯಲ್ಲಿ ಆರ್ಥಿಕ ವ್ಯವಹಾರ ನಡೆಸಲಾಗಿದೆ ಎಂಬ ಬಗ್ಗೆಯೂ ತನಿಖೆ ನಡೆಯುತ್ತಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹ್ಯಾರಿಸ್ ಮತ್ತು ಮುಹಮ್ಮದ್ ನಲಪಾಡ್ ಅವರಿಂದಲೂ ಕೆಲವೊಂದು ಮಾಹಿತಿಗಳನ್ನು ಸಂಗ್ರಹಿಸುವ ಸಾಧ್ಯತೆ ಇದೆ.

### ಸಿಬಿಐ, ಇಡಿ, ಐಟಿ ಬಿಜೆಪಿಗೆ ರಾಜಕೀಯ ಸಾಧನ: ಪ್ರಿಯಾಂಕ್

**ಬೆಂಗಳೂರು:** ಆದಾಯ ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಕೇಂದ್ರೀಯ ತನಿಖಾ ದಳಗಳು (ಸಿಬಿಐ) ಬಿಜೆಪಿಯ ರಾಜಕೀಯ ಸಾಧನಗಳಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.



ಮಾಧ್ಯಮ ಪ್ರತಿನಿಧಿಗಳೊಂದಿಗೆ ಸೋಮವಾರ ಮಾತನಾಡಿದ ಖರ್ಗೆ, ಬಿಟ್‌ಕಾಯಿನ್ ಅಕ್ರಮ ವಹಿವಾಟು ಪ್ರಕರಣದ ಪ್ರಮುಖ ಆರೋಪಿ ಶ್ರೀಕೃಷ್ಣ ರಮೇಶ್ ಉರುಫ್ ಶ್ರೀಕಿ ಜತೆ ಹಣಕಾಸು ವಹಿ ವಾಟು ನಡೆಸಿರುವ ಸಂಬಂಧ ಕಾಂಗ್ರೆಸ್ ಶಾಸಕ ಎನ್.ಎ.ಹ್ಯಾರಿಸ್ ಮೇಲಿನ ಇಡಿ ದಾಳಿ ಖಂಡಿಸಿದರು. ಅಲ್ಲದೆ, ದಾಳಿಗಳಿಗೆ ಕಾರಣ ಸ್ಪಷ್ಟವಾಗಿಲ್ಲ ಎಂದು ಹೇಳಿದರು.

ಪುಟ 2ಕ್ಕೆ

### ಪ್ರಾದೇಶಿಕ ಪಕ್ಷ ಕಟ್ಟುವ ಬಗ್ಗೆ ಚಿಂತನೆ: ಯತ್ನಾಳ್



**ವಿಜಯಪುರ:** ಮುಂದಿನ ತಿಂಗಳು ಒಳ್ಳೆಯ ಮುಹೂರ್ತ ನೋಡಿ ಹೊಸ ರಾಜಕೀಯ ವಿಚಾರ ಪ್ರಾರಂಭ ಮಾಡುತ್ತೇನೆ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜಿಲ್ಲಾವಾರು ಹಿಂದುತ್ವದ ಸಭೆ ಮಾಡುತ್ತೇನೆ. ಕೋಲಾರ ಜಿಲ್ಲೆಯ ಐತಿಹಾಸಿಕ ವಿಘ್ನೇಶ್ವರ ದೇವಸ್ಥಾನದಿಂದ ಸಭೆ ಪ್ರಾರಂಭ ಮಾಡುತ್ತೇನೆ. ಹಿಂದುತ್ವ, ನಿರುದ್ಯೋಗ, ಅಭಿವೃದ್ಧಿ ಮೂರು ಉದ್ದೇಶಗಳೊಂದಿಗೆ ಸಭೆ ಮಾಡುತ್ತೇನೆ. ಮುಂದಿನ ದಿನಗಳಲ್ಲಿ ಪ್ರಾದೇಶಿಕ ಪಕ್ಷ ಕಟ್ಟುವ ಬಗ್ಗೆ ಜನರ ಅಭಿಪ್ರಾಯ ಪಡೆಯುತ್ತೇನೆ. ಪ್ರಾದೇಶಿಕ

ಪುಟ 2ಕ್ಕೆ

## ಡಿಕೆಶಿ ಜೊತೆ ರಾಜಕೀಯ ಚರ್ಚೆ ಮಾಡಿಲ್ಲ: ಜಾರಕಿಹೊಳಿ



**ಬೆಳಗಾವಿ:** ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೊತೆ ಭೇಟಿಯಲ್ಲಿ ಯಾವುದೇ ರಾಜಕೀಯ ವಿಶೇಷತೆ ಇಲ್ಲ. ಯಾವುದೇ ರಾಜಕೀಯ ಚರ್ಚೆ ಮಾಡಿಲ್ಲ ಎಂದು ಸಚಿವ ಸತೀಶ ಜಾರಕಿಹೊಳಿ ಸ್ಪಷ್ಟಪಡಿಸಿದರು.

ನಗರದಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಕ್ಷದ ಸಂಘಟನೆ ಮತ್ತು ಸರ್ಕಾರದ ಕೆಲಸಗಳ ಬಗ್ಗೆ ಚರ್ಚಿಸಲು ಭೇಟಿಯಾಗುವುದು ಸಹಜ. ಚುನಾವಣೆ ಸಂದರ್ಭದಲ್ಲಿ ಅಥವಾ ಪಕ್ಷದ ಸಂಘಟನೆ ದೃಷ್ಟಿಯಿಂದ ಅಲ್ಪಸಂಖ್ಯಾತ ಮುಖಂಡರನ್ನು ಪಕ್ಷದಿಂದ ದೂರವಿಟ್ಟಿದ್ದು ಅಥವಾ ಹೊರಹಾಕಿದ್ದು ಸರಿಯಲ್ಲ ಎಂದು ನನ್ನ ಅಭಿಪ್ರಾಯ ತಿಳಿಸಿದ್ದೇನೆ ಎಂದರು.

ಈ ವಿಷಯದ ಕುರಿತು ಸುದೀರ್ಘವಾಗಿ ಚರ್ಚಿಸಿದ್ದು, ನಡೆದಿರುವ ಲೋಪದೋಷಗಳನ್ನು ಗಮನಿಸಿದ್ದೇನೆ. ಮುಂದಿನ ದಿನಗಳಲ್ಲಿ ಇದನ್ನು ಸರಿಪಡಿಸುವುದಾಗಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದಾರೆ ಎಂದು ಸತೀಶ ತಿಳಿಸಿದರು.

ಪಕ್ಷವು ಎಲ್ಲ ಸಮುದಾಯಗಳನ್ನು ಒಳಗೊಂಡು ಹೋಗಬೇಕಾದ ಅಗತ್ಯವಿದೆ. ಅಲ್ಪಸಂಖ್ಯಾತರು ಕಾಂಗ್ರೆಸ್ ಪಕ್ಷದ ಭದ್ರ ಬುನಾದಿಯಾಗಿದೆ. ಅವರಿಗೆ ಸೂಕ್ತ ಪ್ರಾತಿನಿಧ್ಯ ಮತ್ತು ನ್ಯಾಯ ಸಿಗಬೇಕು ಎಂಬುದು ನಮ್ಮ ನಿಲುವು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಎಸ್‌ಡಿಪಿಐಗೆ ಜಬ್ಬಾರ್ ಹಣಕಾಸು ಬೆಂಬಲ

### ಎಂಎಲ್ಸಿ ಸ್ಥಾನಕ್ಕೂ ರಾಜೀನಾಮೆಗೆ ಮುಸ್ಲಿಂ ನಾಯಕರ ಆಗ್ರಹ

**ಬೆಂಗಳೂರು:** ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಮುಸ್ಲಿಂ ನಾಯಕರ ವಿರುದ್ಧ ಕ್ರಮ ಕೈಗೊಂಡಿದ್ದನ್ನು ಕೆಪಿಸಿಸಿ ಪದಾಧಿಕಾರಿಗಳಾದ ಮುಸ್ಲಿಂ ನಾಯಕರು ಸಮರ್ಥಿಸಿಕೊಂಡಿದ್ದಾರೆ.

ಉಪಚುನಾವಣೆ ಗೊಂದಲ ವಿಚಾರವಾಗಿ ಮುಸ್ಲಿಂ ಸಮುದಾಯದ ಕೆಪಿಸಿಸಿ ಪದಾಧಿಕಾರಿಗಳು ನಗರದಲ್ಲಿ ಸೋಮವಾರ ಸಭೆ ನಡೆಸಿದರು. ಕೆಪಿಸಿಸಿ ಉಪಾಧ್ಯಕ್ಷ ಸೈಯದ್ ಅಹಮದ್, ರಾಜ್ಯ ಗ್ಯಾರಂಟಿ ಸಮಿತಿ ಉಪಾಧ್ಯಕ್ಷ ಮೆಹರೋಜ್ ಖಾನ್, ಉಪಾಧ್ಯಕ್ಷ ಸೌದಾಗರ್, ಪ್ರಧಾನ ಕಾರ್ಯದರ್ಶಿ ಸೈಯದ್ ಅರ್ಷದ್ ಕೆಪಿಸಿಸಿ ಉಪಾಧ್ಯಕ್ಷ ಉಬೇದುಲ್ಲಾ ಷರೀಫ್ ಸಭೆಯಲ್ಲಿ ಭಾಗವಹಿಸಿದ್ದರು.

ಜಬ್ಬಾರ್ ಎಸ್‌ಡಿಪಿಐ ಅಭ್ಯರ್ಥಿಗೆ ಹಣಕಾಸು ಸಹಾಯ ಮಾಡಿದ್ದಾರೆ. ಅಲ್ಪಸಂಖ್ಯಾತ ಘಟಕಕ್ಕೆ ರಾಜೀನಾಮೆ ನೀಡಿದಂತೆ ವಿಧಾನ ಪರಿಷತ್ ಸ್ಥಾನಕ್ಕೂ ಜಬ್ಬಾರ್ ರಾಜೀನಾಮೆ ನೀಡಬೇಕು. ಇಂಥವರ ಮನೆಗೆ ಸಿಎಂ, ಡಿಸಿಎಂ ಹೋಗಬೇಕಿತ್ತೇ ಎಂದು ಪ್ರಶ್ನಿಸಿ ಆಕ್ರೋಶ ಹೊರಹಾಕಿದರು.

ಅಬ್ದುಲ್ ಜಬ್ಬರ್ ವಿರುದ್ಧ ಕ್ರಮ ಕೈಗೊಂಡಿದ್ದಕ್ಕೆ ನಾವು ಸ್ವಾಗತ ಮಾಡುತ್ತೇವೆ. ನಾನು ನಾಯಕ ನಾನು ನಾಯಕ ಎಂಬುದು ಸಚಿವರಿಗೆ ಸಿಕ್ಕ ಕಾಂಗ್ರೆಸ್ ಬಳುವಳಿ.



ಕಾಂಗ್ರೆಸ್ ಕಾರಣದಿಂದಲೇ ಸಂಪನ್ಮೂಲ ಕ್ರೋಢೀಕರಣ ಮಾಡಿ ಮೆರೆಯುತ್ತಿದ್ದಾರೆ. ಯಾರೇ ಆಗಲಿ ಅವರ ವಿರುದ್ಧ ಪಕ್ಷ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಅಗ್ರಹಿಸಿದರು.

ಕಾಂಗ್ರೆಸ್‌ನಲ್ಲಿ ಯಾರೂ ಕೂಡ ಮುಸ್ಲಿಂ ಚಾಂಪಿಯನ್ ಇಲ್ಲ. ಯಾರೇ ಪಕ್ಷ ಬಿಟ್ಟು ಹೋದರೂ ಏನೂ ನಷ್ಟ ಇಲ್ಲ. ಸಿಎಂ ಇಬ್ರಾಹಿಂ, ರೋಷನ್ ಬೇಗ್ ಪಕ್ಷ ಬಿಟ್ಟು ಹೋದ ಬಳಿಕ ಏನಾಯ್ತು? ಯಾರೇ ಹೋದರೂ ಏನೂ ಆಗುವುದಿಲ್ಲ ಎಂದು ಅವರು ಹೇಳಿದರು.

ದಾವಣಗೆರೆಗೆ ವೀಕ್ಷಕರ ತಂಡ ಬಂದಿತ್ತು. ಅಭ್ಯರ್ಥಿಗಳ ಅರ್ಜಿ ಸಂಗ್ರಹಕ್ಕೆ ಒಟ್ಟು 6 ಮಂದಿಯಿಂದ ಅರ್ಜಿ ಸಲ್ಲಿಸಲಾಗಿತ್ತು. ಅಬ್ದುಲ್ ಜಬ್ಬರ್

ಪುಟ 2ಕ್ಕೆ

## ಹೊಸ ಜನಗಣತಿ ನಂತರವೇ ಕ್ಷೇತ್ರ ಮರು ವಿಂಗಡಣೆ ಸೂಕ್ತ

### ಇದೇ ಕಾರಣಕ್ಕೆ ಕಾಂಗ್ರೆಸ್ ವಿರೋಧ: ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

**ಮೈಸೂರು:** ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯನ್ನು ಹೊಸ ಜನಗಣತಿ ನಡೆದ ನಂತರವೇ ಮಾಡುವುದು ಸೂಕ್ತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ನಗರದ ವಿಮಾನ ನಿಲ್ದಾಣದಲ್ಲಿ ಸೋಮವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಈ ಕಾರಣಕ್ಕಾಗಿಯೇ ನಾವು ಕ್ಷೇತ್ರ ಮರು ವಿಂಗಡಣೆಯನ್ನು ವಿರೋಧ ಮಾಡಿದ್ದೆವು. ಕಾಂಗ್ರೆಸ್ ಎಂದಿಗೂ ಮಹಿಳಾ ಮೀಸಲಾತಿ ಪರವಾಗಿಯೇ ಇದೆ ಎಂದು ತಿಳಿಸಿದರು.

ಸಂವಿಧಾನಕ್ಕೆ 73, 74ನೇ ತಿದ್ದುಪಡಿಯನ್ನು ತಂದಿದ್ದು ಕಾಂಗ್ರೆಸ್. ಸ್ಥಳೀಯ ಸಂಸ್ಥೆಗಳಲ್ಲಿ ಶೇ.50ರಷ್ಟು ಮಹಿಳಾ ಮೀಸಲಾತಿ ತಂದಿರುವುದು ಕೂಡ ಕಾಂಗ್ರೆಸ್. 2023ರಲ್ಲಿಯೇ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರವಾಗಿದೆ. ಆಗಲೇ ಅದನ್ನು ಜಾರಿ ಮಾಡಬೇಕಿತ್ತು. ಇಲ್ಲಿಯವರೆಗೆ ಏಕೆ ಕಾಯಬೇಕಿತ್ತು ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಈಗಲೂ 2023ರ ಪ್ರಕಾರವೇ ಮೀಸಲಾತಿ ಜಾರಿ ಮಾಡಲಿ. ಕ್ಷೇತ್ರ ಮರು ವಿಂಗಡಣೆಯನ್ನು ಜನಗಣತಿಯಾದ ನಂತರ ಮಾಡಿದರೆ ಸೂಕ್ತ. ಲೋಕಸಭಾ ಸ್ಥಾನಗಳನ್ನು ಶೇ.50ರಷ್ಟು ಹೆಚ್ಚು ಮಾಡುವುದಾಗಿ ಹೇಳಿದ್ದಾರೆ. ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ. ಜನಗಣತಿ ಮಾಡಿ ಎಲ್ಲರಿಗೂ ಸಮಾನವಾಗಿ ಸ್ಥಾನಗಳನ್ನು ಕೊಡಬೇಕು ಎಂದು ಆಗ್ರಹಿಸಿದರು.



ಜನಸಂಖ್ಯೆ ನಿಯಂತ್ರಣವನ್ನು ದಕ್ಷಿಣ ಭಾರತದ ರಾಜ್ಯಗಳು ಉತ್ತಮವಾಗಿ ಮಾಡಿದ್ದು, ಉತ್ತರ ಭಾರತದ ರಾಜ್ಯಗಳು ಮಾಡಿಲ್ಲ. ಸಹಜವಾಗಿಯೇ ಅವರಿಗೆ ಅನುಕೂಲ ಹಾಗೂ ದಕ್ಷಿಣ ಭಾರತದ ರಾಜ್ಯಗಳಿಗೆ ಅನಾನುಕೂಲವಾಗಲಿದೆ ಎಂದು ಹೇಳಿದರು.

ಪುಟ 2ಕ್ಕೆ

### ಸಿದ್ದರಾಮಯ್ಯ ಕಿವಿಯಲ್ಲಿ ಮೋದಿ ಹೇಳಿದ ಗುಟ್ಟೇನು?

**ಮೈಸೂರು:** ರಾಜ್ಯಕ್ಕೆ ಬಂದಾಗ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಕಿವಿಯಲ್ಲಿ ಏನು ಹೇಳಿದರು ಎಂಬ ಗುಟ್ಟನ್ನು ಸಿಎಂ ಸಿದ್ದರಾಮಯ್ಯ ಬಿಚ್ಚಿಟ್ಟಿದ್ದಾರೆ. ಮೈಸೂರಿನಲ್ಲಿ ಮಾತನಾಡಿದ ಸಿಎಂ, ಮಹಿಳಾ ಮೀಸಲಾತಿ ವಿಚಾರದಲ್ಲಿ ನಿಮ್ಮ ನಿಲುವು ಏನು ಎಂದು ನನ್ನ ಕಿವಿಯಲ್ಲಿ ಪ್ರಧಾನಿ ಮೋದಿ ಕೇಳಿದರು. ನಾನು ಮಹಿಳಾ ಮೀಸಲಾತಿ ಪರವಾಗಿದ್ದೇನೆ ಎಂದು ಹೇಳಿದ್ದೇನೆ ಅಂತಾ ಪಿಎಂ ಗುಟ್ಟನ್ನು ಸಿಎಂ ರಟ್ಟು ಮಾಡಿದರು.

ಮಹಿಳಾ ಮೀಸಲಾತಿ ಮಸೂದೆ ಕುರಿತು ಪ್ರಧಾನಿ ಆರೋಪಿಸಿರುವ ಬಗ್ಗೆ ಪ್ರತಿಕ್ರಿಯಿಸಿ, ಪ್ರಧಾನಿ ಮೋದಿ ಅವರದ್ದು ತಾರತಮ್ಯದ ಧೋರಣೆ. ಅವರು ಸಾಮಾಜಿಕ ನ್ಯಾಯದ ಪರವಾಗಿಲ್ಲ ಎಂದು

ಪುಟ 2ಕ್ಕೆ

## ಬಿಸಿಲಿನ ಝಳಕ್ಕೆ ಯುವಕ ಬಲಿ

**ಬೀದರ್:** ಜಿಲ್ಲೆಯಲ್ಲಿ ಬಿಸಿಲಿನ ಝಳಕ್ಕೆ ಕುಸಿದು ಬಿದ್ದು ಯುವಕ ಸಾವನ್ನಪ್ಪಿರುವ ಘಟನೆ ಕಮಲನಗರ ಪಟ್ಟಣದಲ್ಲಿ ನಡೆದಿದೆ. ಮೊಹ್ಮದ್ ಸಮೀರ್ ಅಹ್ಮದ್ (20) ಸಾವನ್ನಪ್ಪಿದ ಯುವಕ. ಗರಿಷ್ಠ ತಾಪಮಾನ ಸಹಿಸಲಾರದೇ ಸಾವನ್ನಪ್ಪಿದ್ದಾನೆ ಎನ್ನಲಾಗಿದೆ.

ಸಮೀರ್ ತರಕಾರಿ ತರಲು ಹೋಗಿದ್ದ. ಬಳಿಕ ಮನೆಗೆ ವಾಪಸ್ಸಾಗುವಾಗ ತಲೆ ತಿರುಗಿ ಕುಳಿತಿದ್ದ. ಸ್ವಲ್ಪ ಹೊತ್ತಾದ ಮೇಲೆ ಮನೆಗೆ ಮರಳುವಾಗ ಡಿಗ್ಗಿ ಗ್ರಾಮದ ರಸ್ತೆ ಬಳಿ ಕುಸಿದು ಬಿದ್ದು ಸಾವನ್ನಪ್ಪಿದ್ದಾನೆ. ಬಿಸಿಲಿನಿಂದಲೇ ಮಗ ಸಾವನ್ನಪ್ಪಿದ್ದಾನೆ ಎಂದು ತಂದೆ ಲಯಿಕ್ ಅಹ್ಮದ್ ದೂರು ನೀಡಿದ್ದಾರೆ. ಈ ಕುರಿತು ಕಮಲನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

## ಗ್ಯಾಸ್ ಬಳಕೆ ಶೇ.13ರಷ್ಟು ಕುಸಿತ

**ನವದೆಹಲಿ:** ಮಧ್ಯಪ್ರಾಚ್ಯ ಸಂಘರ್ಷದ ಹಿನ್ನೆಲೆಯಲ್ಲಿ ಭಾರತದಲ್ಲಿ ಮಾರ್ಚ್‌ನಲ್ಲಿ ಎಲ್‌ಪಿಜಿ ಬಳಕೆ ಶೇ.13ರಷ್ಟು ಕುಸಿತ ಕಂಡಿದೆ.





ಗ್ಯಾಸ್ ಪೂರೈಕೆಯಲ್ಲಿ ಯುದ್ಧದಿಂದ ಅಡಚಣೆ ಉಂಟಾಗಿರುವುದು ಎಲ್‌ಪಿಜಿ ಬಳಕೆ ತೀವ್ರ ಕುಸಿತಕ್ಕೆ ಕಾರಣವಾಗಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ ಎಲ್‌ಪಿಜಿ 2.729 ದಶಲಕ್ಷ ಟನ್ ಬಳಕೆಯಾಗಿತ್ತು. ಆದರೆ, ಈ ವರ್ಷದ ಮಾರ್ಚ್‌ನಲ್ಲಿ 2.379 ದಶಲಕ್ಷ ಟನ್ ಬಳಕೆಯಾಗಿದೆ. ಪಿಪಿಎಸಿ ದತ್ತಾಂಶಗಳಿಂದ ಮಾಹಿತಿ ಹೊರಬಿದ್ದಿದೆ. ಭಾರತ ತನ್ನ ಒಟ್ಟು ಬೇಡಿಕೆಯ ಎಲ್‌ಪಿಜಿಯಲ್ಲಿ ಶೇ.60ರಷ್ಟು ಆಮದು ಮಾಡಿಕೊಳ್ಳುತ್ತದೆ. ಹಾರ್ಮುಜ್ ಜಲಸಂಧಿ ಮೂಲಕವೇ ಬರಬೇಕಿದ್ದ ಎಲ್‌ಪಿಜಿ, ಪಶ್ಚಿಮ ಏಷ್ಯಾ

ಪುಟ 2ಕ್ಕೆ

## ಹಡಗಿಗೆ ಅಮೆರಿಕಾ ತಡೆ: ಮಾತುಕತೆಗೆ ಇರಾನ್ ತಿರಸ್ಕಾರ

**ಟೆಹ್ರಾನ್:** ಅಮೆರಿಕ ಕೊಲ್ಲಿಯಲ್ಲಿ ಇರಾನ್ ಧ್ವಜ ಹೊತ್ತ ಸರಕು ಹಡಗನ್ನು ತಡೆದಿದೆ. ಟೌಸ್ಕಾ ಹಡಗನ್ನು ಅಮೆರಿಕದ ನೌಕಾಪಡೆ ನಿಲ್ಲಿಸುವಂತೆ ನೀಡಿದ ಎಚ್ಚರಿಕೆಗೆ ಸ್ಪಂದಿಸದ ಕಾರಣ ವಶಪಡಿಸಿಕೊಳ್ಳಲಾಗಿದೆ ಎಂದು ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಇದು ಕದನ ವಿರಾಮದ ಉಲ್ಲಂಘನೆ. ಸಶಸ್ತ್ರ ಕಡಲ್ಗಳ್ಳತನದ ಕೃತ್ಯಕ್ಕೆ ಶೀಘ್ರದಲ್ಲೇ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಇರಾನ್ ಎಚ್ಚರಿಸಿದೆ. ಪಾಕಿಸ್ತಾನದಲ್ಲಿ ಇರಾನ್ ಜೊತೆಗಿನ ಯುದ್ಧವನ್ನು ಕೊನೆಗೊಳಿಸುವ ಕುರಿತು ಎರಡನೇ ಸುತ್ತಿನ ಮಾತುಕತೆಗೆ ಅಮೆರಿಕದ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಮತ್ತೊಂದು ನಿಯೋಗದ ನೇತೃತ್ವ ವಹಿಸಲಿದ್ದಾರೆ ಎಂದು ಶ್ವೇತಭವನ ದೃಢಪಡಿಸಿತ್ತು. ಈ ನಡುವೆಯೇ ಹಾರ್ಮುಜ್‌ನಲ್ಲಿ ಮತ್ತೆ ಇರಾನ್ ಮತ್ತು ಅಮೆರಿಕ ನಡುವೆ ಸಂಘರ್ಷ ಜೋರಾಗಿದೆ.





ಕದನ ವಿರಾಮ ಒಪ್ಪಂದ ಮಾತುಕತೆಗೆ ಇರಾನ್ ನಕಾರ ವ್ಯಕ್ತಪಡಿಸಿದೆ. ಅಮೆರಿಕದ ದಿಗ್ಬಂಧನ ಜಾರಿಯಲ್ಲಿರುವವರೆಗೆ ಶಾಂತಿ ಮಾತುಕತೆ ಸಾಧ್ಯವಿಲ್ಲ. ಎರಡನೇ ಸಭೆಗೆ ಹಾಜರಾಗುವುದಿಲ್ಲ. ಇರಾನ್ ಬಂದರುಗಳ ಸುತ್ತಲೂ ನೌಕಾ ದಿಗ್ಬಂಧನ ಮುಂದುವರಿದಿದೆ. ಇದು ಕದನ ವಿರಾಮ ಒಪ್ಪಂದದ

ಪುಟ 2ಕ್ಕೆ

## ಕೆರೆಯಲ್ಲಿ ಮುಳುಗಿ ಮಾವ-ಅಳಿಯ ಸಾವು

**ಹಾಸನ:** ಕೆರೆಯಲ್ಲಿ ಮುಳುಗಿ ಮಾವ-ಅಳಿಯ ಸಾವನ್ನಪ್ಪಿರುವ ಘಟನೆ ಅರಸೀಕೆರೆ ತಾಲೂಕಿನ ಎನ್. ಹೊಸಳ್ಳಿ ಗ್ರಾಮದಲ್ಲಿ ನಡೆದಿದೆ. ಪ್ರಭಾಕರ್ (45), ಪ್ರತೀಕ್ (12) ಮೃತ ದುರ್ದೈವಿಗಳು.

ಪ್ರತೀಕ್ ದುದ್ದ ಹೋಬಳಿ ಸೋಮನಹಳ್ಳಿ ಗ್ರಾಮದವನು. ಬೇಸಿಗೆ ರಜೆಗೆ ಮಾವ ಪ್ರಭಾಕರ್ ಮನೆಗೆ ಬಂದಿದ್ದ. ಮಾವ-ಅಳಿಯ ಇಬ್ಬರೂ ಕೆರೆಯ ಏರಿ ಮೇಲೆ ನಡೆದುಕೊಂಡು ಹೋಗುತ್ತಿದ್ದರು.

ಪುಟ 2ಕ್ಕೆ



# ಶರಣರ ಕನಸಿನ ಸಮಾಜ ಸಾಕಾರಕ್ಕೆ ಬದ್ಧ

## ಬಸವಾದಿ ಶರಣರ ಮಾರ್ಗದಲ್ಲಿ ನಡೆಯುವ ಶಪಥ: ಮುಖ್ಯಮಂತ್ರಿ ಸಿದ್ದರಾಮಯ್ಯ

**ಮೈಸೂರು:** ಬಸವಣ್ಣ ಮತ್ತಿತರ ಶರಣರ ಕನಸಿನ ಸಮಾಜವನ್ನು ಸಾಕಾರಗೊಳಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ನಾನು ಬಸವಣ್ಣನವರ ಪಕ್ಕಾ ಅನುಯಾಯಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ನಗರದ ಕಲಾಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ, ಬಸವ ಬಳಗಗಳ ಒಕ್ಕೂಟದಿಂದ ಸೋಮವಾರ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬೀದರ್‌ನ ಬಸವ ಯೋಗಾಶ್ರಮದ ಸಿದ್ಧರಾಮ ಶರಣ ಬೆಲ್ದಾಳ ಅವರಿಗೆ ಬಸವ ರಾಷ್ಟ್ರೀಯ ಪುರಸ್ಕಾರ ಪ್ರದಾನ ಮಾಡಿ ಅವರು ಮಾತನಾಡಿದರು.

ಬಸವಾದಿ ಶರಣರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುವ ಶಪಥ ಮಾಡಬೇಕು. ಜಾತಿ ವ್ಯವಸ್ಥೆಯಿಂದ ಜಡ್ಡುಗಟ್ಟಿರುವ ಸಮಾಜದಲ್ಲಿ ಚಲನಶೀಲತೆ ತರಲು ವೈಜ್ಞಾನಿಕ, ವೈಚಾರಿಕ ಶಿಕ್ಷಣ ಪಡೆಯಲೇಬೇಕು. ನಮ್ಮ ಗ್ಯಾರಂಟಿ ಯೋಜನೆಗಳು ಕೂಡ ಬಸವ ತತ್ವದಂತೆ ಎಲ್ಲರನ್ನೂ ಒಳಗೊಂಡಿದೆ ಎಂದು ಅವರು ಹೇಳಿದರು.



ವೈಚಾರಿಕ ಶಿಕ್ಷಣ ಎಲ್ಲರಿಗೂ ಸಿಗುತ್ತಿಲ್ಲ. ಅದಕ್ಕಾಗಿಯೇ ವ್ಯವಸ್ಥೆಯ ಜೊತೆ ರಾಜಿ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಪಟ್ಟಭದ್ರ ಮನುವಾದಿಗಳು ಮೂಢನಂಬಿಕೆಗಳನ್ನು ಬಿತ್ತಿ, ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಲೇ ಇರುತ್ತಾರೆ. ಅಸಮಾನತೆ ಸಮಾಜದಲ್ಲಿ ನಾವು ಇನ್ನೂ ಎಷ್ಟು ದಿನ ಇರಬೇಕು? ನಾವು ಯಾಕೆ ಅನಕ್ಷರಸ್ಥರು, ಬಡವರು, ಸೂರಿಲ್ಲದವರು ಎಂಬ

### ಸಿದ್ಧರಾಮ ಬೆಲ್ದಾಳರಿಗೆ ಬಸವ ರಾಷ್ಟ್ರೀಯ ಪುರಸ್ಕಾರ

'ಬಸವ ರಾಷ್ಟ್ರೀಯ ಪುರಸ್ಕಾರ' ಸ್ವೀಕರಿಸಿದ ಸಿದ್ಧರಾಮ ಶರಣ ಬೆಲ್ದಾಳ ಮಾತನಾಡಿ, ಮಾನವತೆ ಒಂದಾಗಬೇಕು. ಹಿಂದೂ ಒಂದು ಎಂಬುದು ಬೋಗಸ್. ಸಮ ಸಮಾಜ ನಿರ್ಮಾಣದಿಂದ ಮಾತ್ರವೇ ಭಾರತವು ಒಂದಾಗುತ್ತದೆ. ಬಸವನ ಅನುಯಾಯಿ ಎಂಬುದಕ್ಕೆ ಎದೆಗಾರಿಕೆ ಬೇಕು ಎಂದು ಹೇಳಿದರು.

ರಾಜ್ಯ ಸರ್ಕಾರದಿಂದ ಬಸವ ಪರ ಕಾರ್ಯಗಳು ಆಗಿವೆ. ಸಾಂಸ್ಕೃತಿಕ ನಾಯಕ ಘೋಷಣೆ, ಕಚೇರಿಗಳಲ್ಲಿ ಭಾವಚಿತ್ರ

ಪುಟ 2ಕ್ಕೆ

## ಬೆಂಗಳೂರಿನಲ್ಲಿ ಡಿಆರ್‌ಟಿ ಕೇಂದ್ರಕ್ಕೆ ಕರಂದ್ಲಾಜೆ ಪತ್ರ

**ನವದೆಹಲಿ:** ಬೆಂಗಳೂರಿನಲ್ಲಿ ಸಾಲ ವಸೂಲಾತಿ ಮೇಲ್ಮನವಿ ನ್ಯಾಯಮಂಡಳಿ ಸ್ಥಾಪಿಸುವಂತೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪತ್ರ ಬರೆದು ಮನವಿ ಮಾಡಿದ್ದಾರೆ.



ಬೆಂಗಳೂರು ದೇಶದ ಪ್ರಮುಖ ಹಣಕಾಸು ಮತ್ತು ವಾಣಿಜ್ಯ ಕೇಂದ್ರ ವಾಗಿದೆ. ಡಿಆರ್‌ಟಿ ಅಡಿಯಲ್ಲಿ ಉದ್ಭವಿಸುವ ಕೇಸ್‌ಗಳು ಗಣನೀಯ ಪ್ರಮಾಣವನ್ನು ಹೊಂದಿದೆ. ಪ್ರಕರಣಗಳ ಹೆಚ್ಚುತ್ತಿರುವ ಬಾಕಿ ಸಂಖ್ಯೆ ಮತ್ತು ಅಪೀಲ್ ವೇದಿಕೆ ಅನಾನುಕೂಲತೆಯು ನಿರ್ಣಯ ಮತ್ತು ಹಣ ಕಾಸು ಹಕ್ಕುಗಳ ಜಾರಿಯಲ್ಲಿ ವಿಳಂಬಕ್ಕೆ ಕಾರಣವಾಗಿದೆ. ಇಲ್ಲಿ ಡಿಆರ್‌ಟಿ ಅಡಿಯಲ್ಲಿ ದೊಡ್ಡ ಸಂಖ್ಯೆಯ ಪ್ರಕರಣಗಳು ಬರುತ್ತಿವೆ. ಆದರೆ ಅಪೀಲ್‌ಗಳಿಗೆ ಚೆನ್ನೈಗೆ ಪ್ರಯಾಣಿಸುವುದರಿಂದ ನ್ಯಾಯದಲ್ಲಿ ವಿಳಂಬವಾಗುತ್ತಿದೆ. ಇಲ್ಲಿ ಸ್ಥಾಪಿಸಿದರೆ ಅಪೀಲ್‌ಗಳನ್ನು ಸಮಯಕ್ಕೆ ಪರಿಣಾಮಕಾರಿಯಾಗಿ ವ್ಯವಹರಿಸಲು ಸಹಾಯವಾಗುತ್ತದೆ ಎಂದು ಹೇಳಿದ್ದಾರೆ.

# ಬಸವಣ್ಣ ಅವರ ತತ್ವ ಆದರ್ಶಗಳಿಂದ ಉತ್ತಮಸಮಾಜ ನಿರ್ಮಾಣ ಸಾಧ್ಯ

ಕೆ.ಆರ್.ಪೇಟೆ, ಜಗಜ್ಯೋತಿ ಬಸವೇಶ್ವರರು ಜಾತಿ ರಹಿತ ಸಮಾಜವನ್ನು ನಿರ್ಮಾಣ ಮಾಡಿ ಮನುಕುಲಕ್ಕೆ ಹೊಸ ಸಂದೇಶವನ್ನು ನೀಡುವ ಕ್ರಾಂತಿಕಾರಕ ನಿರ್ಧಾರ ಮಾಡಿದವರು. ಸಮಾಜದಲ್ಲಿ ಹೆಣ್ಣು ಮತ್ತು ಗಂಡು ಎರಡೇ ಜಾತಿ ಇರಬೇಕು ಎಂಬ ಸ್ಪಷ್ಟ ಸಂದೇಶವನ್ನು ಸಮಾಜಕ್ಕೆ ನೀಡಿದವರು. ಇಂತಹ ಮಹಾನ್ ದರ್ಶನಿಕರನ್ನು ಒಂದು ಜಾತಿಯ ಸಂಕೋಲೆಯಲ್ಲಿ ಬಂಧಿಸುವುದು ವಿಶ್ವನಾಯಕ ಬಸವಣ್ಣನವರಿಗೆ ಮಾಡಿದ ಅಪಮಾನವಾಗುತ್ತದೆ. ನಾಗರೀಕ ಸಮಾಜದ ಎಲ್ಲರೂ ಸೇರಿ ಬಸವೇಶ್ವರರ ಜಯಂತಿಯನ್ನು ಹಬ್ಬದ ಮಾದರಿಯಲ್ಲಿ ಆಚರಿಸಬೇಕು. ಬಸವಣ್ಣ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ 12ನೇ ಶತಮಾನದ ಮಹಾನ್ ಮಾನವತಾವಾದಿ ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು.

ಕೆ.ಆರ್ ಪೇಟೆ ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿ ತಾಲ್ಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಕಾರ್ಯಕ್ರಮ ಕುರಿತು ಮಾತನಾಡಿದರು. ಬಸವಣ್ಣ ಕೇವಲ ಒಬ್ಬ ವ್ಯಕ್ತಿ ಅಲ್ಲ, ಒಂದು ಚಳವಳಿ. ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಯಾಗಿದ್ದು, ಅವರು ಕನ್ನಡಕ್ಕೆ ವಚನಗಳ ಕೊಡುಗೆ ನೀಡಿದ ಸಾಹಿತಿ, ತಮ್ಮ ವಚನಗಳ ಮೂಲಕ ಸಮಾನತೆಗಾಗಿ ಹೋರಾಡಿದ ಕ್ರಾಂತಿಕಾರಿ, ಮಾನವೀಯತೆಯನ್ನು



ಎತ್ತಿಹಿಡಿದ ದಾರ್ಶನಿಕ. ಬಸವ ಜಯಂತಿ ಎಂದರೆ ಕೇವಲ ಹಾರ ಹಾಕಿ ಹಾಡು ಹಾಡುವುದಲ್ಲ. ಅವರ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದೇ ನಿಜವಾದ ಬಸವ ಜಯಂತಿ ಕಾರ್ಯಕ್ರಮವಾಗಿದೆ.

ಕರ್ನಾಟಕದ ಸಾಂಸ್ಕೃತಿಕ ಮತ್ತು ಸಾಮಾಜಿಕ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಮಹಾನ್ ಚೇತನ ಬಸವಣ್ಣನವರ ಜನ್ಮದಿನವನ್ನು 'ಬಸವ ಜಯಂತಿಯನ್ನು ಹೆಚ್ಚು ಹೆಚ್ಚು ಜನ ಸೇರಿ ಅರ್ಥಪೂರ್ಣವಾಗಿ ಆಚರಿಸಬೇಕು. ಈ ಮೂಲಕ ಬಸವಣ್ಣ ಅವರಿಗೆ ಗೌರವ ತರುವ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ನಾಗೇಂದ್ರಕುಮಾರ್ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ 12ನೇ ಶತಮಾನದ ಶರಣ ಚಳವಳಿಯ ಹರಿಕಾರರಾದ ಬಸವೇಶ್ವರರು ವೈದಿಕ ಕಾಲದ ಮೌಢ್ಯ, ಜಾತಿ ಪದ್ಧತಿ ಮತ್ತು ಅಸಮಾನತೆಯ ವಿರುದ್ಧ ದಿಟ್ಟವಾಗಿ ನಿಂತ ಸಮಾಜ ಸುಧಾರಕರು. ಅವರ ಜನ್ಮದಿನವನ್ನು ಪ್ರತಿ ವರ್ಷ ವೈಶಾಖ ಮಾಸದ ಶುಕ್ಲ ತೃತೀಯೆಯಂದು, ಅಕ್ಷಯ ತೃತೀಯೆಯ ದಿನವೇ ಆಚರಿಸಲಾಗುತ್ತದೆ ಇಂತಹ ಮಹನೀಯರ ಜಯಂತಿಗೆ ಕಡಿಮೆ ಬಂದಿರುವುದು ಸರಿಯಲ್ಲ. ಮುಂದಿನ ದಿನಗಳಲ್ಲಿ ಎಲ್ಲಾ ಸಮುದಾಯದವರಿಗೆ ತಾಲ್ಲೂಕು ಆಡಳಿತವು ಆಹ್ವಾನ ನೀಡಿ ಹೆಚ್ಚಿನ ಜನರ ನಡುವೆ ಸಡಗರ ಸಂಭ್ರಮದಿಂದ ಆಚರಿಸಲು ಕ್ರಮ ವಹಿಸಬೇಕು ಎಂದು ಸಲಹೆ ನೀಡಿದರು.

ಪ್ರಧಾನ ಉಪನ್ಯಾಸ ನೀಡಿದ ಶಿಕ್ಷಣ ಸಂಯೋಜಕ ವೀರಭದ್ರಯ್ಯ ಕ್ರಿ.ಶ. 1134ರಲ್ಲಿ ವಿಜಯಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಮಾದರಸ ಮತ್ತು ಮಾದಲಾಂಬಿಕೆ ದಂಪತಿಗಳ ಮಗನಾಗಿ ಬಸವಣ್ಣನವರು ಜನಿಸಿದರು. ಬಾಲ್ಯದಿಂದಲೇ ಮೌಢ್ಯವನ್ನು ಪ್ರಶ್ನಿಸುವ ಮನೋಭಾವ ಹೊಂದಿದ್ದ ಅವರು ಉಪನಯನವನ್ನು ತಿರಸ್ಕರಿಸಿ 'ಕೂಡಲಸಂಗಮ'ಕ್ಕೆ ತೆರಳಿದರು. ಅಲ್ಲಿ ವಿದ್ಯಾಭ್ಯಾಸ ಮುಗಿಸಿ, ಕಲಚುರಿ ಅರಸ ಬಿಜ್ಜಳನ ಆಸ್ಥಾನದಲ್ಲಿ ಭಂಡಾರಿಯಾಗಿ, ನಂತರ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದರು. ಅಧಿಕಾರದಲ್ಲಿದ್ದರೂ ಸರಳ ಜೀವನ ನಡೆಸಿ, 'ಕಾಯಕವೇ ಕೈಲಾಸ' ಎಂಬ ತತ್ವವನ್ನು ಬದುಕಿ ತೋರಿಸಿದರು. ಎಂದು ವೀರಭದ್ರಯ್ಯ ತಿಳಿಸಿದರು.

ಗವೀಮಠದ ಶ್ರೀಗಳಾದ ಸ್ವತಂತ್ರ ಚನ್ನವೀರಯ್ಯ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ವೀರಶೈವ–ಲಿಂಗಾಯಿತ ಮಹಾಸಭಾ ಅಧ್ಯಕ್ಷ ಸುಜೇಂದ್ರಕುಮಾರ್, ಸಮಾಜ ಸೇವಕರು ಹಾಗೂ ಆರ್.ಟಿ.ಓ.ಅಧಿಕಾರಿಗಳ ಸಂಘದ ಅಧ್ಯಕ್ಷ ಆರ್.ಟಿ.ಓ.ಮಲ್ಲಿಕಾರ್ಜುನ್, ತಾಲ್ಲೂಕು ಆಡಳಿತ ಮುಖ್ಯಸ್ಥರಾದ ತಹಸೀಲ್ದಾರ್ ಲೋಕೇಶ್, ಬಿಇಓ ತಿಮ್ಮೇಗೌಡ, ತಾ.ಪಂ.ಇಓ ಸುಷ್ಮ, ಪುರಸಭೆ ಮುಖ್ಯಾಧಿಕಾರಿ ಅಶೋಕ್, ತಾಲ್ಲೂಕು ಭೂದಾಖಲೆಗಳ ಸಹಾಯಕ ನಿರ್ದೇಶಕ ಸಿದ್ದಯ್ಯ, ವಲಯ ಅರಣ್ಯಾಧಿಕಾರಿ ಡಾ.ಅನಿತಾ, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ದಿವಾಕರ್, ತಾಲ್ಲೂಕು ವೀರಶೈವ–ಲಿಂಗಾಯಿತ ಸಮಾಜದ ಮುಖಂಡರಾದ ತೋಟಪ್ಪಶೆಟ್ಟಿ, ಬ್ಯಾಂಕ್ ಪರಮೇಶ್, ಎಲ್.ಐ.ಸಿ.ಶಿವಪ್ಪ, ನಾಡಬೋಗನಹಳ್ಳಿ ಶಿವಪ್ಪ, ಕೆ.ಎಸ್.ರಾಜೇಶ್, ಮೆಡಿಕಲ್ ಶಿವಪ್ಪ, , ಮಂಚಿಬೀಡು ಬಸವಲಿಂಗಪ್ಪ, ಅಪ್ಪಾಜಿ, ಚೋಕನಹಳ್ಳಿ ಪ್ರಕಾಶ್, ಗೋವಿಂದನಹಳ್ಳಿ ಪ್ರಕಾಶ್, ಎಂ.ಎಸ್.ರಾಜಶೇಖರ್, ವಡ್ಡರಹಳ್ಳಿ ಕುಮಾರ್, ಡಿ.ಸಿ.ಕುಮಾರ್, ಜಗದಾಂಭ, ಆಶಾರಾಣಿ, ಪೂರ್ಣಿಮಾ, ಪವಿತ್ರ, ಮಡುವಿನಕೋಡಿ ಗಂಗಾಧರ್, ಎಂ.ಎಸ್. ಮಹಾದೇವಪ್ಪ, ಪುರ ಮಂಜುನಾಥ್, ವಸಂತಪ್ಪ, ಎಂ.ಎಸ್.ಶಿವಮೂರ್ತಿ, ಡಿ.ಎಸ್.ಮಂಜುನಾಥ್, ಎಂ.ಜಿ.ರವಿಕುಮಾರ್ ಸೇರಿದಂತೆ ವಿವಿಧ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶಿಕ್ಷಣ ಸಂಯೋಜಕ ಎಂ.ಎಸ್.ಸುರೇಶ್ ಸ್ವಾಗತಿಸಿದರು. ತಾಲ್ಲೂಕು ವೀರಶೈವ ಲಿಂಗಾಯಿತ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಎಂ.ಎಸ್. ಮಹಾದೇವಪ್ಪ ವಂದಿಸಿದರು. ದೈಹಿಕ ಶಿಕ್ಷಣಾಧಿಕಾರಿ ಪ್ರಭುಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಮೊದಲ ಪುಟದಿಂದ

## ಶರಣರ ಕನಸಿನ ಸಮಾಜ ಸಾಕಾರಕ್ಕೆ ಬದ್ಧ

ಕಾರಣ ಎಲ್ಲರೂ ತಿಳಿದುಕೊಳ್ಳಬೇಕು. ಬಸವಣ್ಣ, ಬುದ್ಧ, ಗಾಂಧೀಜಿ, ಅಂಬೇಡ್ಕರ್ ಹೋರಾಟ ನೆನೆಯಬೇಕು. ಚರಿತ್ರೆ ಅರಿತು ಇತಿಹಾಸ ಸೃಷ್ಟಿಸಬೇಕು ಎಂದು ಸಿದ್ದರಾಮಯ್ಯ ಹೇಳಿದರು.

ಸಾಮಾಜಿಕ ಮತ್ತು ಆರ್ಥಿಕ ತಳಹದಿ ಮೇಲೆ ರಾಜಕೀಯ ಸ್ವಾತಂತ್ರ್ಯ ನಿಂತಿದೆ. ಪ್ರತಿಯೊಬ್ಬರಿಗೂ ಆರ್ಥಿಕ, ಸಾಮಾಜಿಕ ಶಕ್ತಿ ಬರಬೇಕು. ಇಲ್ಲದಿದ್ದರೆ ಪಟ್ಟಭದ್ರ ಹಿತಾಸಕ್ತಿಗಳು ವಿಜೃಂಭಿಸುತ್ತಾರೆ. ಅವರ ಕರ್ಮ, ವರ್ಣಾಶ್ರಮ ಸಿದ್ಧಾಂತವನ್ನು ತಿರಸ್ಕರಿಸಿ ಎಂದು ಕರೆನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಾತನಾಡಿ, ಸಮುದಾಯಗಳ ನಡುವೆ ಸಾಮರಸ್ಯ ಮೂಡಿಸಲು, ಬಸವ ತತ್ವಗಳ ಅನುಷ್ಠಾನ ಸೇವೆಯಲ್ಲಿ ನಿರತರಾಗಿರುವ ಸಿದ್ಧರಾಮ ಶರಣರಿಗೆ ಬಸವ ರಾಷ್ಟ್ರೀಯ ಪುರಸ್ಕಾರ ನೀಡಲಾಗಿದೆ. ಕಲ್ಯಾಣ ಕ್ರಾಂತಿ ವಿಚಾರಗಳನ್ನು ಪಸರಿಸುತ್ತಿರುವ ಅವರಿಗೆ ಮಹಾರಾಷ್ಟ್ರ ಸರ್ಕಾರದ ಬಸವ ಭೂಷಣ ಪ್ರಶಸ್ತಿಯೂ ಬಂದಿದೆ ಎಂದು ಹೇಳಿದರು.

ಸಿದ್ಧಾರ್ಥನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿನ ಬಸವೇಶ್ವರ ಪ್ರತಿಮೆ ನಿರ್ಮಾಣಕ್ಕೆ ಶಂಕುಸ್ಥಾಪನೆಯ ಶಿಲಾನ್ಯಾಸ ಅನಾವರಣಗೊಳಿಸಲಾಯಿತು. ಸಾಂಸ್ಕೃತಿಕ ನಾಯಕ ಬಸವಣ್ಣ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಸಂಸದ ಸುನಿಲ್ ಬೋಸ್, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ಜಿ.ಟಿ.ದೇವೇಗೌಡ, ಗಣೇಶ್ ಪ್ರಸಾದ್, ವಿಜಯಾನಂದ ಕಾಶಪ್ಪನವರ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಕೆ.ಶಿವಕುಮಾರ್, ಡಾ.ಯತೀಂದ್ರ ಇತರರು ಪಾಲ್ಗೊಂಡಿದ್ದರು.

## ಸಿಬಿಐ, ಇಡಿ, ಐಟಿ ಬಿಜೆಪಿಗೆ ರಾಜಕೀಯ ಸಾಧನ: ಪ್ರಿಯಾಂಕ್

ಐಟಿ, ಇ.ಡಿ ಮತ್ತು ಸಿಬಿಐ ಬಿಜೆ ಪಿಗೆ ರಾಜಕೀಯ ಸಾಧನಗಳಲ್ಲದೆ ಬೇರೇನೂ ಅಲ್ಲ. ಅವರು ಇಷ್ಟು ದಿನ ಏನು ಮಾಡು ತ್ತಿದ್ದರು? ಈಗ ಏಕೆ ದಾಳಿ ನಡೆಸಲಾಗು ತ್ತಿದೆ ಎಂಬುದು ನಮಗೆ ತಿಳಿದಿಲ್ಲ. ಇ.ಡಿ ಆರೋಪಪಟ್ಟಿ ಸಲ್ಲಿಸಲಿ ಆಗ ಅವರ ಮೇಲೆ ಏಕೆ ದಾಳಿ ನಡೆಸಲಾಗುತ್ತಿದೆ ಎಂದು ನಮಗೆ ತಿಳಿಯುತ್ತದೆ. ಇ.ಡಿ ದಾಳಿಯಿಂದ ಶಿಕ್ಷೆಯ ಪ್ರಮಾಣ ಕೇವಲ ಶೇ.2ರಷ್ಟಿದೆ. ಆದರೆ, ಅವರು ಬಿಜೆಪಿ ಆಡಳಿತದ ಕೈಗೊಂಬೆಗಳು ಎಂದು ವಾಗ್ದಾಳಿ ನಡೆಸಿದರು.

## ಸಿದ್ದರಾಮಯ್ಯ ಕಿವಿಯಲ್ಲಿ ಮೋದಿ ಹೇಳಿದ ಗುಟ್ಟೇನು?

ಟೀಕಿಸಿದರು. ಬಿಜೆಪಿ ಅಧಿಕಾರಕ್ಕೆ ಬಂದು 12 ವರ್ಷ ಆದರೂ ಮಹಿಳಾ ಮೀಸಲಾತಿ ಏಕೆ ಜಾರಿಮಾಡಲಿಲ್ಲ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು. ಮುಂದಿನ ದಿನಗಳಲ್ಲಿ ಕಾಂಗ್ರೆಸ್ಸಿಗೆ ಜನ ಪಾಠ ಕಲಿಸಲಿದ್ದಾರೆ ಎಂಬ ಪ್ರಧಾನಿ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಮೋದಿ ರಾಜಕೀಯ ಮಾಡುತ್ತಿದ್ದಾರೆ. ಮೂರನೇ ಎರಡರಷ್ಟು ಬಹುಮತವಿಲ್ಲ ಎಂದು ಗೊತ್ತಿದ್ದೂ ಮಹಿಳಾ ಮೀಸಲಾತಿ, ಕ್ಷೇತ್ರ ಮರು ವಿಂಗಡಣೆಯನ್ನು ಒಟ್ಟಿಗೆ ತರಬೇಕಾದ ಅಗತ್ಯವಿರಲಿಲ್ಲ ಎಂದು ಹೇಳಿದರು.

## ಹೊಸ ಜನಗಣತಿ ನಂತರವೇ ಕ್ಷೇತ್ರ ಮರು ವಿಂಗಡಣೆ ಸೂಕ್ತ

ಗ್ಯಾರಂಟಿಗಳನ್ನು ಎಲ್ಲಾ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಸೇರಿಸಿರುವ ಬಗ್ಗೆ ಮಾತನಾಡಿ, 2023ರಲ್ಲಿ ಪ್ರಧಾನಿ ನರೇಂದ್ರ ಮೋದಿ ವಿರೋಧಿಸಿದ್ದರು. ಈಗ ಅವರೇ ಯೋಜನೆಗಳನ್ನು ಘೋಷಿಸುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ಇಡಿ ದಾಳಿ ಬಗ್ಗೆ ಗೊತ್ತಿಲ್ಲ: ಶಾಸಕ ಎನ್.ಎ.ಹ್ಯಾರೀಸ್ ಮನೆಯ ಮೇಲೆ ಇಡಿ ದಾಳಿಯಾಗಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಈ ಬಗ್ಗೆ ನನಗೆ ತಿಳಿದಿಲ್ಲ ಎಂದರು. ಮೂಲಗಳ ಪ್ರಕಾರ ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಮಿತ್ರ ಪಕ್ಷಗಳು ಗೆಲ್ಲಲಿವೆ. ಕೇರಳದಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲಲಿದೆ ಎಂದು ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

## ಪ್ರಾದೇಶಿಕ ಪಕ್ಷ ಕಟ್ಟುವ ಬಗ್ಗೆ ಚಿಂತನೆ: ಯತ್ನಾಳ್

ಪಕ್ಷ ಕಟ್ಟುವ ಚಿಂತನೆ ಪ್ರಾರಂಭವಾಗಿದೆ ಎಂದು ತಿಳಿಸಿದರು.

ಹಿಂದೂಪರ ಚಿಂತನೆ ಉಳ್ಳವರು ನಿರುದ್ಯೋಗಿ ಯುವಕರನ್ನು, ಅಭಿವೃದ್ಧಿ ಚಿಂತನೆ ಪರ ಇರುವ ಜನರ ಸಭೆ ಮಾಡುತ್ತೇನೆ. ಜನರ ಅಭಿಪ್ರಾಯ ಪಡೆದು ಮುಂದೆ ಪ್ರಾದೇಶಿಕ ಪಕ್ಷ ಕಟ್ಟುವ ಬಗ್ಗೆ ಚಿಂತನೆ ಮಾಡುತ್ತೇನೆ. ಚುನಾವಣೆ ಆಯೋಗ ಪಕ್ಷಕ್ಕೆ ಯಾವ ಚಿಹ್ನೆ ಕೊಡುತ್ತಾರೆ ನೋಡಬೇಕು ಎಂದು ಹೇಳಿದರು.

## ಸಿದ್ಧರಾಮ ಬೆಲ್ದಾಳರಿಗೆ ಬಸವ ರಾಷ್ಟ್ರೀಯ ಪುರಸ್ಕಾರ

ಕಲ್ಯಾಣದಲ್ಲಿ ಅನುಭವ ಮಂಟಪ ನಿರ್ಮಾಣ, ಗ್ಯಾರಂಟಿಗಳ ಅನುಷ್ಠಾನವು ಬಸವ ತತ್ವದ ಕನಸುಗಳಾಗಿವೆ ಎಂದು ಶ್ಲಾಘಿಸಿದರು.

ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಜನರ ಭಾಷೆಯಾದ ಕನ್ನಡವನ್ನು ದೈವ ಭಾಷೆಯಾಗಿಸಿದ ನಾಯಕ ಬಸವಣ್ಣ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ನಮ್ಮ ನಾಡಿನ ಧ್ರುವತಾರೆಗಳು ಎಂದು ಹೇಳಿದರು.

## ಹಡಗಿಗೆ ಅಮೆರಿಕಾ ತಡೆ: ಮಾತುಕತೆಗೆ ಇರಾನ್ ತಿರಸ್ಕಾರ

ಉಲ್ಲಂಘಿಸುತ್ತದೆ. ಈ ಹಿನ್ನೆಲೆ ಮಾತುಕತೆಗಳಿಂದ ಹಿಂದೆ ಸರಿಯುತ್ತಿದ್ದೇವೆ ಎಂದು ಇರಾನ್ ಸ್ಪಷ್ಟಪಡಿಸಿದೆ.

# ಏ.30ರಂದು ಬಿಳಿಗಿರಿರಂಗನ ರಥೋತ್ಸವ

## ಭಕ್ತಾಧಿಗಳಿಗೆ ಮೂಲಸೌಕರ್ಯ ಕಲ್ಪಿಸಲು ಶಾಸಕ ಎ.ಆರ್.ಕೃಷ್ಣಮೂರ್ತಿ, ಡಿಸಿ ಶ್ರೀರೂಪ ಸೂಚನೆ

ಚಾಮರಾಜನಗರ, ಜಿಲ್ಲೆಯ ಪ್ರಸಿದ್ಧ ಯಾತ್ರಾಕ್ಷೇತ್ರ ಬಿಳಿಗಿರಿರಂಗನಬೆಟ್ಟದ ಬಿಳಿಗಿರಿರಂಗನಾಥಸ್ವಾಮಿ ಬ್ರಹ್ಮರಥೋತ್ಸವವು ಏಪ್ರಿಲ್ 30ರಂದು ನಡೆಯಲಿರುವ ಹಿನ್ನೆಲೆಯಲ್ಲಿ ಭಕ್ತಾಧಿಗಳಿಗೆ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ಕಲ್ಪಿಸಲು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಹಾಗೂ ಜಿಲ್ಲಾಧಿಕಾರಿ ಶ್ರೀರೂಪ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಳಿಗಿರಿರಂಗನ ಬೆಟ್ಟದ ಲೋಕೋಪಯೋಗಿ ಇಲಾಖೆಯ ಅತಿಥಿಗೃಹ ಸಭಾಂಗಣದಲ್ಲಿಂದು ಶ್ರೀ ಬಿಳಿಗಿರಿರಂಗನಾಥಸ್ವಾಮಿ ಬ್ರಹ್ಮರಥೋತ್ಸವ ಸಂಬಂಧ ನಡೆದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಶಾಸಕರು ಹಾಗೂ ಜಿಲ್ಲಾಧಿಕಾರಿ ಮಾತನಾಡಿದರು.

ಬಿಳಿಗಿರಿರಂಗನಬೆಟ್ಟದ ರಥೋತ್ಸವ ಹಿನ್ನೆಲೆಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಭಕ್ತಾಧಿಗಳು ಕ್ಷೇತ್ರಕ್ಕೆ ಆಗಮಿಸಲಿದ್ದಾರೆ. ಭಕ್ತಾಧಿಗಳಿಗೆ ಕುಡಿಯುವ ನೀರು, ಸಾರಿಗೆ ವ್ಯವಸ್ಥೆ, ವಾಹನಗಳ ನಿಲುಗಡೆ, ಭದ್ರತಾ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಎಲ್ಲಾ ಸಿದ್ದತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ತಿಳಿಸಿದರು.

ಅಧಿಕಾರಿಗಳಿಗೆ ನಿಗದಿಪಡಿಸಲಾಗಿರುವ ಜವಾಬ್ದಾರಿಗಳ ಸಂಬಂಧ ನಿರ್ದೇಶನ ನೀಡಿದ ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು ಕ್ಷೇತ್ರಕ್ಕೆ ಆಗಮಿಸಲಿರುವುದರಿಂದ ಮುಂಚಿತವಾಗಿಯೇ ಜಾತ್ರಾ ದಿನಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಕೊಳವೆ ಬಾವಿಗಳನ್ನು ದುರಸ್ಥಿ ಪಡಿಸಬೇಕು. ಕುಡಿಯಲು ಶುದ್ಧ ಕುಡಿಯುವ ನೀರು ಹಾಗೂ ಇನ್ನಿತರೆ ಬಳಕೆಗೆ ಪ್ರತ್ಯೇಕ ವಾಟರ್ ಟ್ಯಾಂಕ್‌ಗಳನ್ನು ಇರಿಸಿಕೊಳ್ಳಬೇಕು. ಎಲ್ಲಿಯೂ, ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದರು.



### ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಿ

**ಬೆಟ್ಟದ ರಸ್ತೆಯ ಎಡ ಹಾಗೂ ಬಲಭಾಗದಲ್ಲಿ ರಸ್ತೆಯು ಹಳ್ಳಕೊಳ್ಳಗಳಿಂದ ಕೂಡಿದ್ದು, ಇದನ್ನು ಸರಿಪಡಿಸಿ ವಾಹನಗಳ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಶಾಸಕರು ನಿರ್ದೇಶನ ನೀಡಿದರು. ಇದೇ ವೇಳೆ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಶಾಸಕರು ರಸ್ತೆ ಸರಿಪಡಿಸಲು ಶೀಘ್ರವೇ ಮುಂದಾಗಬೇಕಿದೆ. ಈ ನಿಟ್ಟಿನಲ್ಲಿ ಸ್ಥಳೀಯ ಎಂಜಿನಿಯರ್ಗಳಿಗೆ ಸೂಚಿಸುವಂತೆ ತಿಳಿಸಿದರು.**

### ಜಾತ್ರೆ ವೇಳೆ ನಿರಂತರ ವಿದ್ಯುತ್ ಒದಗಿಸಿ

**ರಥೋತ್ಸವ, ಜಾತ್ರಾ ಸಂದರ್ಭದಲ್ಲಿ ನಿರಂತರ ವಿದ್ಯುತ್ ಒದಗಿಸಬೇಕು. ಆರೋಗ್ಯ ಇಲಾಖೆ ವತಿಯಿಂದ ತಾತ್ಕಾಲಿಕ ಆರೋಗ್ಯ ಕೇಂದ್ರ ಸ್ಥಾಪನೆ ಮಾಡಿ ವೈದ್ಯರು, ಸಿಬ್ಬಂದಿಯನ್ನು ನಿಯೋಜಿಸಬೇಕು. ಕುಡಿಯುವ ನೀರಿನ ಪರೀಕ್ಷೆ ಮಾಡಿಸಬೇಕು. ಅಗ್ನಿಶಾಮಕ ದಳ ಸಹ ನಿಯೋಜನೆಯಾಗಬೇಕು. ಕ್ಷೇತ್ರದಲ್ಲಿ ಸ್ವಚ್ಚತೆ ಕಾಪಾಡಿಕೊಳ್ಳಲು ಇತರೆ ಕಡೆಯಿಂದ ಪೌರಕಾರ್ಮಿಕ ಸಿಬ್ಬಂದಿಯನ್ನು ನಿಯೋಜಿಸಬೇಕು. ಕಸ ವಿಲೇವಾರಿ ತ್ವರಿತವಾಗಿ ಆಗಬೇಕು ಎಂದು ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ಸೂಚಿಸಿದರು.**

ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ರಥೋತ್ಸವಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಊಟದ (ಪ್ರಸಾದ) ವ್ಯವಸ್ಥೆ ಮಾಡುತ್ತಿದ್ದಾರೆ. ಹೀಗಾಗಿ ಪ್ರಸಾದ ತಯಾರಿಕೆಗೆ ಅಗತ್ಯವಿರುವ ಸ್ಥಳಾವಕಾಶ, ಪೂರಕ ಸಿದ್ದತೆಗಳಿಗೆ ಅಧಿಕಾರಿಗಳು ಮುತುವರ್ಜಿಯಿಂದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಶಾಸಕರು ತಿಳಿಸಿದರು.

ವಿವಿಧ ಭಾಗಗಳಿಂದ ಭಕ್ತಾಧಿಗಳು ಜಾತ್ರಾ ಮಹೋತ್ಸವಕ್ಕೆ ಬರಲು ಸುಸಜ್ಜಿತ ಬಸ್ಸುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳು ನಿಯೋಜಿಸಬೇಕು. ಬಿಳಿಗಿರಿರಂಗನಬೆಟ್ಟದ ಬಸ್ ನಿಲ್ದಾಣದ ಸ್ಥಳದಲ್ಲಿ ಶಾಮಿಯಾನ ಹಾಕಿಸಿ ನೆರಳಿನ ವ್ಯವಸ್ಥೆ ಕಲ್ಪಿಸಬೇಕು. ಕುಡಿಯುವ ನೀರನ್ನು ಸಹ ಬಸ್ ನಿಲ್ದಾಣದಲ್ಲಿ ಪೂರೈಸಬೇಕು. ಬಿಳಿಗಿರಿರಂಗನಬೆಟ್ಟದ ರಸ್ತೆಯ ಚೆಕ್‌ಪೋಸ್ಟ್‌ನಿಂದ ದ್ವಿಚಕ್ರ ವಾಹನಗಳಿಗೆ ಈ ಹಿಂದಿನಂತೆಯೇ ಬೆಟ್ಟಕ್ಕೆ ತೆರಳಲು ನಿರ್ಬಂಧ ಹೇರಲಾಗುವುದರಿಂದ ಹೆಚ್ಚಿನ ಬಸ್ಸುಗಳನ್ನು ಅಗತ್ಯಕ್ಕನುಗುಣವಾಗಿ ತೆರಳುವಂತೆ ಮಾಡಬೇಕು ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಚ್.ವಿ.ಚಂದ್ರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು, ಉಪವಿಭಾಗಾಕಾರಿ ದಿನೇಶ್‌ಕುಮಾರ್ ಮೀನಾ, ತಹಶೀಲ್ದಾರ್ ನಯನಾ, ದೇವಾಲಯದ ಆಗಮಿಕರಾದ ಎಸ್. ನಾಗೇಂದ್ರ ಭಟ್, ಅರ್ಚಕರಾದ ಎ.ಎಸ್. ರವಿಕುಮಾರ್, ದೇವಾಲಯ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಜೆ. ಶ್ರೀನಿವಾಸ್, ಸಮಿತಿ ಸದಸ್ಯರು, ಇತರೆ ಮುಖಂಡರು, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಕಿರಣ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಸಂತೋಷ್ ಇಮ್ಯಾನುವೆಲ್, ಕೆ.ಎಸ್.ಆರ್.ಟಿ.ಸಿ. ವಿಭಾಗೀಯ ನಿಯಂತ್ರಣಾಧಿಕಾರಿ ನಾಗರಾಜು, ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಎನ್. ಸುರೇಶ್, ಇತರೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮೊದಲ ಪುಟದಿಂದ

## ದಾವಣಗೆರೆ: ಎಸ್‌ಡಿಪಿಐಗೆ ಜಬ್ಬಾರ್ ಹಣಕಾಸು ಬೆಂಬಲ

ಸೇರಿ ಯಾರೆಲ್ಲ ಟಿಕೆಟ್‌ಗೆ ಅರ್ಜಿ ಸಲ್ಲಿಸಿದ್ದರೋ ಆ ಸಭೆಗೆ ನಮ್ಮನ್ನು ಆಹ್ವಾನಿಸಲಾಗಿತ್ತು. ಸುರ್ಜೇವಾಲಾ ನೇತೃತ್ವದಲ್ಲಿ ಸಿಎಂ, ಡಿಸಿಎಂ ಹಾಜರಿಯಲ್ಲಿ ಸಭೆ ನಡೆದಿತ್ತು. ಈ ಸಭೆಯಲ್ಲಿ ಅಬ್ದುಲ್ ಜಬ್ಬರ್ ಹೆಸರು ಬಿಟ್ಟು ಬೇರೆಯವರ ಬಗ್ಗೆ ಮಾತೇ ಆಡಿರಲಿಲ್ಲ. ಅರ್ಜಿ ಹಾಕಿದ ಆರು ಮಂದಿ ಪರವಾಗಿ ಮಾತಾಡಿದ್ದರೆ ದಾವಣಗೆರೆ ಟಿಕೆಟ್ ಮುಸ್ಲಿಮರಿಗೆ ಸಿಗುತ್ತಿತ್ತು ಎಂದು ಹೇಳಿದರು.

## ಗ್ಯಾಸ್ ಬಳಕೆ ಶೇ.13ರಷ್ಟು ಕುಸಿತ

ಸಂಘರ್ಷದಿಂದ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ಅಡ್ಡಿಯಾಗಿದೆ. ಈ ಹಿನ್ನೆಲೆ ಎಲ್‌ಪಿಜಿ ಪೂರೈಕೆಯಲ್ಲಿ ನಿರಂತರ ವ್ಯತ್ಯಯವಾಗುತ್ತಿದೆ. ಎಲ್‌ಪಿಜಿ ಅಭಾವದ ಪರಿಣಾಮ ಗೃಹೇತರ ವಿಭಾಗಗಳ ಮೇಲೆ ಹೆಚ್ಚು ತೀವ್ರವಾಗಿದೆ.

## ಮಾವ–ಅಳಿಯ ಸಾವು

ಈ ವೇಳೆ ಕಾಲು ಜಾರಿ ಪ್ರತೀಕ್ ಕೆರೆಗೆ ಬಿದ್ದಿದ್ದಾನೆ. ಪ್ರತೀಕ್‌ನನ್ನು ರಕ್ಷಿಸಲು ಮಾವ ಪ್ರಭಾಕರ್ ಕೂಡ ಕೆರೆಗೆ ಇಳಿದಿದ್ದಾರೆ. ಈಜು ಬಾರದ ಕಾರಣ ಇಬ್ಬರೂ ಕೆರೆಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಇಬ್ಬರ ಮೃತದೇಹಗಳನ್ನು ಅಗ್ನಿಶಾಮಕದಳದ ಸಿಬ್ಬಂದಿ ಹೊರತೆಗೆದಿದ್ದಾರೆ. ಗಂಡಸಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

# ಏ.26ರಂದು ಸಾಂಸ್ಕೃತಿಕ ಸಮ್ಮೇಳನ




ಮೈಸೂರು: ಧಾರವಾಡದ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ಏ.26ರಂದು ರಾಜ್ಯ ಸರ್ಕಾರಿ ನೌಕರರ ಸಾಂಸ್ಕೃತಿಕ ಸಮ್ಮೇಳನ ನಡೆಯಲಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಸ್ಕೃತಿ ಮತ್ತು ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಡಾ. ಕೆ.ಲಕ್ಷ್ಮಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಅಂದು ಬೆಳಗ್ಗೆ 10ಕ್ಕೆ ಕಾರ್ಯಕ್ರಮ ಆರಂಭವಾಗ ಲಿದೆ. ರಾಜ್ಯದ ವಿವಿಧೆಡೆಯಿಂದ ಸುಮಾರು ಸಾವಿರ ಮಂದಿ ಸರ್ಕಾರಿ ನೌಕರರು ಪಾಲ್ಗೊಂಡು ತಮ್ಮ ಪ್ರತಿಭೆ ಪ್ರದರ್ಶಿಸಲಿದ್ದಾರೆ. ಈ ವೇಳೆ ನೂತನ ಪದಾಧಿಕಾರಿಗಳ ಪದಗ್ರಹಣ, ಸಾಧಕ ಸರ್ಕಾರಿ ನೌಕರರಿಗೆ ಸನ್ಮಾನ ನಡೆಯಲಿದೆ ಎಂದರು.

ಬಿ.ಎನ್. ಪಲ್ಲವಿ ಮಾತನಾಡಿ, ಸರ್ಕಾರಿ ನೌಕರರಲ್ಲಿನ ಪ್ರತಿಭೆ ಅನಾವರಣಕ್ಕೆ ಇದು ಸೂಕ್ತ ವೇದಿಕೆಯಾಗಿದೆ. ನೌಕರರು ಎದುರಿಸುತ್ತಿರುವ ಒತ್ತಡ ನಿವಾರಣೆಗೆ ಅವಕಾಶ ಕಲ್ಪಿಸುವ ಉದ್ದೇಶವಿದೆ. ಸಾಹಿತ್ಯಾಸಕ್ತರನ್ನು ಒಂದೆಡೆ ಸೇರಿಸುವ ಪ್ರಯತ್ನ ಇದಾಗಿದೆ ಎಂದರು. ಮಮತಾ ಮಾತನಾಡಿ, ಇಂದು ಬಹಳಷ್ಟು ಮಂದಿ ತಮ್ಮ ಮಕ್ಕಳನ್ನು ಶಾಲಾ ಕಾಲೇಜಿಗೆ ಸೇರಿಸಿದರೆ ತಮ್ಮ ಕೆಲಸ ಮುಗಿಯಿತು ಎಂದುಕೊಳ್ಳುತ್ತಾರೆ. ಆದರೆ ಮಕ್ಕಳಿಗೆ ನಾಡು, ನುಡಿ, ಸಂಸ್ಕೃತಿಯ ಅರಿವು ಮೂಡಿಸುವ ಕೆಲಸವನ್ನು ಸಹಾ ತಮ್ಮ ಸಂಘ ಮಾಡುತ್ತಿದೆ. ಕನ್ನಡ ಜಾಗೃತಿ ಅಭಿಯಾನ ಸಹಾ ಹಮ್ಮಿಕೊಂಡಿದೆ. ಕನ್ನಡದ ಅಸ್ಮಿತೆಗೆ ಧಕ್ಕೆ ಬಂದಾಗ ಅದರ ವಿರುದ್ಧ ಧ್ವನಿಯೆತ್ತುತ್ತಿದೆ ಎಂದರು. ಗಣೇಶ್ ನಿಲುವಾಗಿಲು, ರಾಘವೇಂದ್ರ ಇದ್ದರು.

ಗಣ್ಯರಿಗೆ ಸನ್ಮಾನ

# ಬಿಜೆಪಿ ಕಚೇರಿಯಲ್ಲಿ ಬಸವೇಶ್ವರರ ಜಯಂತಿ

ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಯ ವತಿಯಿಂದ ಭಾರತೀಯ ಜನತಾ ಪಾರ್ಟಿಯ ಕಚೇರಿಯಲ್ಲಿ 895ನೇ ಬಸವೇಶ್ವರ ಜಯಂತಿ ಕಾರ್ಯಕ್ರಮ ವಿಜೃಂಭಣೆಯಿಂದ ಆಚರಿಸಲಾಯಿತು.

ಮೈಸೂರ್ ಟಾರ್ಪಲಿನ್ಸ್ ಮಾಲೀಕ ವೀರಭದ್ರಪ್ಪನವರು,ಡಿಎವಿ ಶಾಲೆಯ ಚೇರ್ಮನ್ ಸಚ್ಚಿದಾನಂದ ಮೂರ್ತಿ, ಅನಾಥಾಲಯದ ಮುಖ್ಯಸ್ಥ ಮಾದೇಶ್ವರ, ಉದ್ಯಮಿ ವರ್ಷ ಶ್ರೀ ಕಂಠಯ್ಯ, ಡಾ. ಅಮೃತ, ಡಾ.ರಾಜೇಶ್, ಪತ್ರಕರ್ತ ಪ್ರವೀಣ್, ಯುವ ಉದ್ಯಮಿ ದೀಪು ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ಜೆಎಸ್‌ಎಸ್ ಮಹಾಸಂಸ್ಥಾನದ ಸುತ್ತೂರು ಶಿಕ್ಷಣ ಸಂಸ್ಥೆಗಳ ಆಡಳಿತ ಅಧಿಕಾರಿ ತ್ರಿಪುರಾಂತಕರ ಬಸವೇಶ್ವರರ ಕುರಿತು ಉಪನ್ಯಾಸವನ್ನು ನೀಡಿ, 12ನೇ ಶತಮಾನದಲ್ಲಿ ಹುಟ್ಟಿ ಬೆಳೆದು ಕಲ್ಯಾಣದಲ್ಲಿ ಕ್ರಾಂತಿಯನ್ನೇ



ಸಾಮಾಜಿಕ ಪಿಡುಗುಗಳ ವಿರುದ್ಧ ಧ್ವನಿ ಎತ್ತಿದವರು ಬಸವಣ್ಣ ಆಗಿದ್ದಾರೆ. ಇವತ್ತು ಇಡೀ ವಿಶ್ವಕ್ಕೆ ಮಾನವತೆ ಹರಿಕಾರರಾಗಿ ಪೂಜಿಸ ಲ್ಪಡುತ್ತಿದ್ದಾರೆ ಎಂದರು. ತದನಂತರ ಭಾರತೀಯ ಜನತಾ ಪಾರ್ಟಿಯಲ್ಲಿ ಸಾಕಷ್ಟು ವರ್ಷಗಳಿಂದ ಕಾರ್ಯ ನಿರ್ವಹಿಸಿರುವ ಹಿರಿಯ ಸದಸ್ಯರಾದ ಪುಟಬುದ್ಧಿ ತೋಂಟದಾರ್ಯ, ನಿರಂಜನ್ ಕುಮಾರ್ ಮಾಜಿ ಶಾಸಕ ಎನ್. ನಾಗೇಂದ್ರ, ಮಾಜಿ ಸಂಸದ ಗ್ರಾಮಾಂತರ ಜಿಲ್ಲಾ ಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ, ಸ್ವಾಮಿ ಮರಳಾಪುರ, ಇ.ಸಿ.ನಿಂಗರಾಜು, ನಿಕಟ ಪೂರ್ವ ಜಿಲ್ಲಾಧ್ಯಕ್ಷ ಮಹೇಂದ್ರ, ಮಂಗಳ ಸೋಮಶೇಖರ್, ನಿರಂಜನ್ ಕುಮಾರ್, ಮಾಜಿ ಮೇಯರ್ ಶಿವಕುಮಾರ್, ಸಂದೇಶ್ ಸ್ವಾಮಿ, ಜಿಲ್ಲಾ ವಕ್ತಾರ ಡಾ.ಕೆ.ವಸಂತ್ ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ.ಕೆ. ರುದ್ರಮೂರ್ತಿ, ವಿನಯ್, ಪರೀಕ್ಷಿತ್ ರಾಜ ಅರಸು, ಸೋಮಸುಂದರ್, ಮಹಿಳಾ ಮುಖಂಡರಾದ ಮೋನಿಕಾ, ರೇಣುಕಾ ರಾಜ, ಸುನಿಲ್, ದಾರಿಪುರ ಚಂದ್ರು, ನಗರ ಜಿಲ್ಲಾ ಕಾರ್ಯದರ್ಶಿ ನಾಗೇಂದ್ರ, ರಾಜ್ಯ ಕಾರ್ಯಕಾರಣಿ ಸದಸ್ಯ ಕಂಡೇಶ್, ಉಮೇಶ್, ವೀರಭದ್ರ, ಮಾಧ್ಯಮ ವಕ್ತಾರ ಸಂತೋಷ, ಮಹೇಶ್, ರಾಜೇಶ್ ಅರಸು ಇನ್ನಿತರರು ಉಪಸ್ಥಿತರಿದ್ದರು

# ರಾಜ್ಯ ಸರ್ಕಾರ ಇಡೀ ರಾಜ್ಯದ ಜನರನ್ನು ಸಂಕಷ್ಟದಲ್ಲಿರಿಸಿದೆ



ಗುಂಡ್ಲುಪೇಟೆ:ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ ಭ್ರಷ್ಟಾಚಾರ ಹೆಚ್ಚಿದೆ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಹಾಳು ಮಾಡಿದೆ ಜನರ ಸಂಕಷ್ಟಕ್ಕೆ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ವಿಧಾನಪರಿಷತ್ ಪ್ರತಿ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯಾದ್ಯಂತ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದು ಬೆಂಗಳೂರಿಗೂ ಇದರ ಬಿಸಿತಟ್ಟಿದೆ. ಜನ ಸಂಕಷ್ಟದಿಂದ ಬಳಲುತಿದ್ದರೂ ಕಾಂಗ್ರೆಸ್ ಸರ್ಕಾರ ಒಂದು ಕಡೆ ಹೇಗಾದರೂ ಇನ್ನೂ ಎರಡು ವರ್ಷ ಅಧಿಕಾರ ಪೂರೈಸಿದರೆ ಸಾಕು ಎಂದು. ಮತ್ತೊಂದು ಕಡೆ ಮುಖ್ಯಮಂತ್ರಿ ಸ್ಥಾನದಿಂದ ಇಳಿಯಿರಿ.ನನಗೆ ಮುಖ್ಯಮಂತ್ರಿ ಪಟ್ಟ ಕೊಡಿ ಎಂದು ಕಿತ್ತಾಡುತಿದ್ದಾರೆ.ಇವರ ಅಧಿಕಾರದ ದಾಹಕ್ಕೆ ರಾಜ್ಯವನ್ನು ಬಲಿ ಕೊಡುವ ಕೆಲಸ ಮಾಡುತಿದ್ದಾರೆ ಎಂದರು.

ಕಾಂಗ್ರೆಸ್ ಪಕ್ಷ ಬದುಕಿದ್ದಿಯಾ,ಸತ್ತಿದ್ದಿಯಾ ಎನ್ನುವುದನ್ನು ಜನ ಯೋಚನೆ ಮಾಡಬೇಕು. ಇವರಿಗೆ ಇನ್ನೂ ಉಳಿಗಾಲ ಇಲ್ಲ.ಪರಿಶಿಷ್ಟ ಜಾತಿ ಮತ್ತು ವರ್ಗಗಳು ಕಾಂಗ್ರೆಸ್ ವೋಟ್ ಬ್ಯಾಂಕ್ ಆಗಿದ್ದವು.ಆದರೆ ನೀವು ಮಾಡಿರುವ ಅನ್ಯಾಯಕ್ಕೆ ಮುಂದೆ ಕಾಂಗ್ರೆಸ್ ಪಕ್ಷಕ್ಕೆ ಇವಾರರೂ ವೋಟು ಹಾಕುವುದಿಲ್ಲ.ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ಮೇಲೆ ಎಸ್.ಇ.ಪಿ. ಮತ್ತು ಟಿ.ಎಸ್.ಪಿ ಹಣವನ್ನು ಬೇರೆ ಇಲಾಖೆಯವರಿಗೆ ಕೊಟ್ಟು ದಲಿತರಿಗೆ ದ್ರೋಹ ಎಸಗಿದ್ದಾರೆ.53ಸಾವಿರ ಕೋಟಿ ಹಣವನ್ನು ಗ್ಯಾರಂಟಿ ಯೋಜನೆಗೆ ಬಳಕೆ ಮಾಡಿಕೊಂಡಿದ್ದಿರಿ.ಭಾಗ್ಯ ಜ್ಯೋತಿ, ಕುಟೀರ ಜ್ಯೋತಿಗೆ 75 ಯೂನಿಟ್ ಉಚಿತ ವಿದ್ಯುತ್ ಎಂದು ಬಸವರಾಜ ಬೊಮ್ಮಾಯಿ ಘೋಷಣೆ ಮಾಡಿದ್ದರು.ನೀವೇನು ಹೊಸದಾಗಿ ಉಚಿತ ವಿದ್ಯುತ್ ನೀಡಿಲ್ಲ.ಶಕ್ತಿ ಯೋಜನೆಯಲ್ಲಿ ಸಂಚರಿಸುವ ದಲಿತ ಮಹಿಳೆಯರಿಗೂ ಪರಿಶಿಷ್ಟರ ಯೋಜನೆಯಲ್ಲಿನ ಹಣವನ್ನು ಸರ್ಕಾರ ಬಳಕೆ ಮಾಡಿಕೊಳ್ಳುತಿದ್ದರಿಲ್ಲ ಬಸ್ಸಿನಲ್ಲಿ ಎಸ್.ಸಿ.ಎಸ್.ಟಿ ಮಹಿಳೆಯರು ಪ್ರಯಾಣ ಮಾಡುತಿದ್ದಾರೆ ಎಂಬುದು ನಿಮಗೆ ಹೇಗೆ ಗೊತ್ತು ನೀವೇನಾದರೂ ಜಾತಿ ಪ್ರಮಾಣ ಪತ್ರ ಕೇಳಿ ಟಿಕೆಟ್ ನೀಡುತ್ತಿದ್ದಿರಾ .ಜನಸಂಖ್ಯೆಗೆ ಅನುಗುಣವಾಗಿ ಹಣ ತೆಗೆಯುತ್ತಿರಾ.ಪರಿಶಿಷ್ಟರು ಬಸ್ಸಿನಲ್ಲಿ ಸಂಚರಿಸುವುದಿಲ್ಲ ಆದರೂ ಅವರ ಹೆಸರಿನಲ್ಲಿ ಹಣ ತೆಗೆದು ದಲಿತರಿಗೆ ಮೋಸ ಮಾಡುತ್ತಿದ್ದಾರೆ ಎಂದರು

ತಾಲ್ಲೂಕಿನಲ್ಲಿ ಯಥೇಚ್ಛವಾಗಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎನ್ನುವ ಆರೋಪ ಕೇಳಿಬಂದಿದೆ.ಶಾಸಕರೆ ಅಕ್ರಮ ಗಣಿಗಾರಿಕೆಯಲ್ಲಿ ಪಾಲುದಾರರು.ಯಾರಾದರೂ ಪ್ರಶ್ನೆ ಮಾಡಿದರೆ ನಾನು ಉದ್ಯಮಿ ಎಂದು ಹೇಳುವ ಇವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲಿ.ಅಕ್ರಮ ಗಣಿಗಾರಿಕೆ ಮಾಡಲು ಶಾಸಕ ಸ್ಥಾನ ಬೇಕೆ.ಇದು ಕಾನೂನು ಬಾಹಿರ.ಉದ್ಯಮ ಮಾಡುವುದಾದರೆ ಶಾಸಕರಾಗಲು ನೀವು ಯೋಗ್ಯರಲ್ಲ ಎಂದು ಹೇಳಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಜನ್ಮದಲ್ಲೂ ಅಧಿಕಾರಕ್ಕೆ ಬರಲ್ಲ. ಟಾರ್ಗೆಟ್ ನೀಡಿ ಪಟ್ಟಣದಲ್ಲಿ 5–10 ಎಂ.ಎಸ್.ಐ.ಎಲ್‌ಗಳು ಪ್ರಾರಂಭ ಮಾಡಲು ಸರ್ಕಾರ ಅನುಮತಿ ನೀಡಿದ್ದು ಇಷ್ಟು ಮದ್ಯ ಮಾರಾಟ ಮಾಡಬೇಕು ಎಂದು ಟಾರ್ಗೆಟ್ ನೀಡುತಿದ್ದಾರೆ ಎಂದರೆ ನೀವು ಕುಡಿಯಲೇಬೇಕು ಎಂದು ಅರ್ಥ.ಮುಂದಿನ ಬಾರಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಕುಡಿಯುವುದನ್ನು ಕಡ್ಡಾಯ ಮಾಡುತ್ತಾರೆ ವ್ಯಂಗ್ಯವಾಡಿದರು. ಪಟ್ಟಣದಲ್ಲಿ ಟಿಪ್ಪರ್ ಹಾವಳಿ ಮೀತಿಮಿರಿದೆ.ವೇಗವಾಗಿ ಸಂಚರಿಸುವುದರಿಂದ ಅಪಘಾತ ಪ್ರಕರಣಗಳು ಜಾಸ್ತಿಯಾಗುತ್ತಿವೆ ಇದನ್ನು ಸಾರಿಗೆ ಇಲಾಖೆಯ ಅಧಿಕಾರಿಗಳ ಜೊತೆ ಪ್ರಶ್ನೆ ಮಾಡಿದತೆ ರಾಜಕಾರಣಿಗಳ ಒತ್ತಡ ಹಿನ್ನೆಲೆ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸಿದ್ದು ಇಲ್ಲಿನ ಅಕ್ರಮಗಳಿಗೆ ಶಾಸಕ ಗಣೇಶ್ ಪ್ರಸಾದ್ ನೇರ ಹೊಣೆ ಎಂದರು. ತಾಲೂಕು ಸೇರಿದಂತೆ ಬಳ್ಳಾರಿ, ಚಿಕ್ಕಬಳ್ಳಾಪುರ ಮತ್ತು ಕೋಲಾರದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು ಇದನ್ನು ಸ್ಥಗಿತಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ರಮ ತೆಗೆದುಕೊಳ್ಳಬೇಕು.ಬೆಲೆ ಏರಿಕೆಯಲ್ಲಿ ಕಾಂಗ್ರೆಸ್ ಸರ್ಕಾರ ಮುಂದೆ ಇದ್ದು.ಬೆಲೆ ಏರಿಕೆಯಲ್ಲಿ ಬಹುಮಾನ ನೀಡುವುದಾದರೆ ಸಿದ್ದರಾಮಯ್ಯನವರಿಗೆ ನೀಡಬೇಕು ಎಂದರು. ಸುದ್ದಿ ಗೋಷ್ಠಿಯಲ್ಲಿ ತಾಲೂಕು ಬಿಜೆಪಿ ಮಂಡಲ ಅಧ್ಯಕ್ಷ ಸಿ.ಮಹದೇವ ಪ್ರಸಾದ್, ಎಸ್.ಸಿ ಮೋರ್ಚಾ ಜಿಲ್ಲಾಧ್ಯಕ್ಷ ಡಾ.ನವೀನ್ ಮೌರ್ಯ, ಮೂಡ್ನಕೂಡು ಪ್ರಕಾಶ್, ಅಗತಗೌಡನಹಳ್ಳಿ ಬಸವರಾಜು,ಜಿ.ಡಿ.ಎಲ್ ಸುರೇಶ್,ಮಹೇಂದ್ರ, ,ಪುರಸಭಾ ಮಾಜಿ ಸದಸ್ಯ ನಾಗೇಶ್, ಗ್ರಾಮ ಪಂಚಾಯತಿ ಮಾಜಿ ಸದಸ್ಯ ನಾಗುಸ್ವಾಮಿ,ರೇವಣ್ಣ ಕಬ್ಬಹಳ್ಳಿ ಶಿವು ವೀರನಪುರ ,ಕಿರಣ್ ನಂಜುಂಡ ಸ್ವಾಮಿ ಇತರರು ಉಪಸ್ಥಿತರಿದ್ದರು.

## ಸಚಿವ ಹೆಚ್.ಸಿ.ಮಹದೇವಪ್ಪ ಹುಟ್ಟುಹಬ್ಬ ಆಚರಣೆ



ಚಾಮರಾಜನಗರ, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರ ಹುಟ್ಟುಹಬ್ಬವನ್ನು ನಗರದ ಮೂಡಲಧ್ವನಿ ವೃದ್ಧಾಶ್ರಮದಲ್ಲಿ ವೃದ್ಧರಿಂದ ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

ನಗರದ ಅಂಗವಾಗಿ ಭೀಮ್ ರಾವ್ ಅಂಬೇಡ್ಕರ್ ಸೇನೆ ಹಾಗೂ ಸುನೀಲ್ ಬೋಸ್ ಅಭಿಮಾನಿ ಬಳಗದ ವತಿಯಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು. ವೃದ್ಧರಿಂದ ಕೇಕ್ ಕತ್ತರಿಸಿ ಹಂಚಲಾಯಿತು. ಇದೇ ವೇಳೆ ಬೆಳಗಿನ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್ ಮಾತನಾಡಿ, ಸಮಾಜ ಕಲ್ಯಾಣ ಸಚಿವರಾದ ಹೆಚ್.ಸಿ.ಮಹದೇವಪ್ಪ ಅವರು ಹುಟ್ಟುಹಬ್ಬವನ್ನು ಮೂಡಲಧ್ವನಿ ವೃದ್ಧರೊಂದಿಗೆ ಆಚರಣೆ ಮಾಡಲಾಗಿದೆ. ಹೆಚ್.ಸಿ. ಮಹದೇವಪ್ಪ , ಶೋಷಿತರ ಧ್ವನಿಯಾಗಿ ಸಮಾಜದ ಎಳಿಗೆಗೆ ಕಟಿಬದ್ಧರಾಗಿ ಅನೇಕ ಆಡಳಿತಾತ್ಮಕ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಅವರನ್ನು ಸಮಾಜದ ಮುಖ್ಯವಾಹಿನಿ ತರಲು ಹತ್ತಾರು ವರ್ಷಗಳಿಂದ ಕೆಲಸ ಮಾಡುತಿದ್ದಾರೆ ಎಂದು ಗುಣಗಾನ ಮಾಡಿದರು. ಕಾರ್ಯಕ್ರಮದ ನೇತೃತ್ವ ವಹಿಸಿದ್ದ

ಭೀಮ್ ರಾವ್ ಅಂಬೇಡ್ಕರ್ ಸೇನೆಯ ರಾಜ್ಯಾಧ್ಯಕ್ಷ ಗಣೇಶ ಪ್ರಸಾದ್ ಮಾತನಾಡಿ,ಕರ್ನಾಟಕದ ಏಕೈಕ ನಾಯಕ, ಸಂವಿಧಾನದ ಆಶಯಗಳನ್ನು ದೇಶಕ್ಕೇ ಸಾರುವ ಸಲುವಾಗಿ ಶಾಲಾ ಕಾಲೇಜು ಮತ್ತು ಸರ್ಕಾರಿ ಕಚೇರಿಗಳಲ್ಲಿ ಸಂವಿಧಾನ ಪೀಠಿಕೆ ವಾಚನವನ್ನು ಕಡ್ಡಾಯಗೊಳಿಸಿದ ನಾಯಕ ಎಂದು ಹೇಳಿದರು. ಮಹದೇವಪ್ಪ ಅವರು ಇನ್ನೂ ಹೆಚ್ಚಿನ ಕಾಲ ಮಂತ್ರಿಯಾಗಿ ಮತ್ತಷ್ಟು ಜನಸೇವೆ ಮಾಡಲಿ ಎಂದು ಆಶಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನಾಗರತ್ನ , ನಗರಸಭಾ ಮಾಜಿ ಅಧ್ಯಕ್ಷೆ ಚಿನ್ನಮ್ಮ, ನಾಗಶ್ರೀ ನಗರಸಭಾ ಮಾಜಿ ಸದಸ್ಯ ರಾಮಸಮುದ್ರ ಬಸವರಾಜು, ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು, , ಮುಖಂಡರಾದ ಮಹೇಶ್ ಕುದರ್, ಅಮಚವಾಡಿ ಶಿವಣ್ಣ, ರಾಮಸಮುದ್ರ ಪ್ರಸನ್ನ, ಆಲೂರುಶೇಷಣ್ಣ, ರಾಮು, ಲೋಹಿತ್, ಶಿವಣ್ಣ, ಇತರರು ಹಾಜರಿದ್ದರು.

**ಸಚಿವ ಹೆಚ್ ಸಿ ಮಹದೇವಪ್ಪ ಹುಟ್ಟು ಹಬ್ಬದ ಪ್ರಯುಕ್ತ**

## ರೋಗಿಗಳಿಗೆ ಹಣ್ಣು ಹಂಪಲು ವಿತರಣೆ, ಉಪಹಾರ ವ್ಯವಸ್ಥೆ



ಹನೂರು: ತಾಲೂಕಿನ ಕೌದಳ್ಳಿ ಗ್ರಾಮದ ವೃದ್ಧಾಶ್ರಮದಲ್ಲಿನ ವಯೋವೃದ್ಧರಿಗೆ ಹಾಗೂ ರಾಮಪುರ ಸಮುದಾಯ ಆರೋಗ್ಯ ಕೇಂದ್ರದ ಹೊರ ರೋಗಿಗಳಿಗೆ ಹಣ್ಣು ಹಂಪಲು, ಸಸ್ಯಹಾರ,ಮಾಂಸಹಾರ ಉಪಹಾರ ವ್ಯವಸ್ಥೆ ಮಾಡುವ ಮೂಲಕ ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್ ಸಿ ಮಹದೇವಪ್ಪ ರವರ ಹುಟ್ಟುಹಬ್ಬವನ್ನು ಆಚರಣೆ ಮಾಡಲಾಯಿತು.

ಕಾಂಗ್ರೆಸ್ ಪಕ್ಷದ ಜಿಲ್ಲಾ ವಕ್ತಾರ ಮಧುವನಹಳ್ಳಿ ಶಿವಕುಮಾರ್ ಮಾತನಾಡಿ ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್ ಸಿ ಮಹದೇವಪ್ಪ ರಾಜ್ಯದ ಧೀಮಂತ ನಾಯಕರಾಗಿದ್ದು,ಶೋಷಿತ ವರ್ಗಗಳ ಧ್ವನಿಯಾಗಿ ಸಮಾಜದ ಏಳಿಗೆಗೆ ಕಟ್ಟಿ ಬದ್ಧರಾಗಿ ಅನೇಕ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಹಿಂದುಳಿದ ವರ್ಗದವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಹತ್ತಾರು ವರ್ಷಗಳಿಂದ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಲೋಕೋಪಯೋಗಿ ಸಚಿವರಾಗಿ, ಆರೋಗ್ಯ ಸಚಿವರಾಗಿ ಪ್ರಸ್ತುತ ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿ ಹಲವು ಬದಲಾವಣೆಗಳನ್ನು ತರುವ ಮೂಲಕ ಉತ್ತಮ ಆಡಳಿತ ನಡೆಸುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯರವರ ಸಚಿವ ಸಂಪುಟದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿ ರಾಜ್ಯದಲ್ಲಿಯೇ ಉತ್ತಮ ಆಡಳಿತ ನೀಡಿದ್ದಾರೆ ಅವರಿಗೆ ಭಗವಂತ ಹೆಚ್ಚಿನ ಆರೋಗ್ಯ ಆಯಸ್ಸು ಕರುಣಿಸಲಿ ಮುಂದಿನ ದಿನಗಳಲ್ಲಿ ಉನ್ನತವಾದ ಹುದ್ದೆ ಸಿಗಲಿ ಎಂದರು.

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಕಾಂಗ್ರೆಸ್ ಪಕ್ಷವನ್ನು ಮಹಿಳಾ ವಿರೋಧಿ ಎಂದು ಬಿಂಬಿಸುತ್ತಿದ್ದಾರೆ.ಆದರೆ ಕಾಂಗ್ರೆಸ್ ಪಕ್ಷ ಅಂದಿನಿಂದಲೂ ಮಹಿಳೆಯರಿಗೆ ಸೂಕ್ತ ಸ್ಥಾನಮಾನ ನೀಡಿಕೊಂಡು ಬಂದಿದೆ. ಬಿಜೆಪಿಯವರು ಮಹಿಳೆಯರಿಗೆ ಶೇಕಡ 33% ಮೀಸಲಾತಿ ನೀಡಬೇಕೆಂದು ಎಂದಿಗೂ ಒತ್ತಾಯಿಸಿಲ್ಲ, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ ತಿದ್ದುಪಡಿಯನ್ನು ತಂದವರು ಪ್ರಧಾನಮಂತ್ರಿಯಾಗಿದ್ದ ರಾಜೀವ್ ಗಾಂಧಿ ಅವರು ಜಿಲ್ಲಾ ಮತ್ತು ತಾಲೂಕು ಪಂಚಾಯಿತಿಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿ ನೀಡಬೇಕೆಂದು ಬಿಜೆಪಿ ಎಂದಿಗೂ ಒತ್ತಾಯಿಸಿಲ್ಲ ಈಗ ಚುನಾವಣೆ ಇರುವುದರಿಂದ ಮಹಿಳಾ ಮೀಸಲಾತಿಗೆ ಒತ್ತಾಯಿಸಿ ರಾಜಕೀಯ ಮಾಡುತ್ತಿದ್ದಾರೆ. ಸೋನಿಯಾ ಗಾಂಧಿ ರವರು ಚುನಾವಣೆ ಮುಗಿದ ನಂತರ ಎಲ್ಲಾ ಪಕ್ಷದವರನ್ನು ಸಭೆ ಕರೆದು ಉತ್ತಮ ನಿರ್ಧಾರ ತೆಗೆದುಕೊಳ್ಳೋಣ ಚುನಾವಣೆ ಮುಗಿಯುವವರೆಗೆ ಯಾವುದೇ ಚರ್ಚೆ ಬೇಡ ಎಂದು ತಿಳಿಸಿದರೂ ಬಿಜೆಪಿಯವರು ಮಾತ್ರ ಚುನಾವಣಾ ಪ್ರಚಾರದ ಲಾಭಕ್ಕಾಗಿ ಮಸೂದೆ ಮಂಡಿಸಿ ರಾಜಕೀಯ ಗಿಮಿಕ್ ಮಾಡುತ್ತಿದ್ದಾರೆ ಎಂದರು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೊಪ್ಪಳ ಮಹದೇವ ನಾಯಕ, ಕಂಠೀರವ ಸ್ಟುಡಿಯೋ ನ ಮಾಜಿ ನಿರ್ದೇಶಕರಾದ ಮಂಗಲ ಪುಟ್ಟರಾಜು ರಾಮಪುರ ವಿಭಾಗದ ಎಸ್ ಸಿ ಘಟಕದ ಅಧ್ಯಕ್ಷ ರಾಮಲಿಂಗಂ, ಉಪಾಧ್ಯಕ್ಷ ಗುರುದೇವ್, ರಾಮಪುರ ಬ್ಲಾಕ್ ಯೂಥ್ ಕಾಂಗ್ರೆಸ್ ಅಧ್ಯಕ್ಷ ರಮೇಶ್,ಯುವ ಮುಖಂಡರಾದ ಅಮೋಘ ರಾವ್, ಇನ್ನಿತರರು ಹಾಜರಿದ್ದರು.

# ಸಮಾನತೆಯ ಹರಿಕಾರ ಬಸವಣ್ಣ

## ಎಂ.ರಾಮಚಂದ್ರ ಅಭಿಮತ । ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಬಸವ ಜಯಂತಿ



ಚಾಮರಾಜನಗರ, 12ನೇ ಶತಮಾನದಲ್ಲಿ ಬಸವೇ ಶ್ವರರು ಅಸಮಾನತೆಗಳ ವಿರುದ್ಧ ಹೋರಾಡಿದರು ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಹೇಳಿದರು.

ನಗರದ ರಾಮಸಮುದ್ರ ಕುಲುಮೆ ರಸ್ತೆಯ ಲ್ಲಿರುವ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ವಿಶ್ವ ಗುರು ಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯ ಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಮಾತನಾಡಿದರು. 12ನೇ ಶತಮಾನದ ಬಸವಣ್ಣನವರು ಜಾತಿ, ಲಿಂಗ ಆರ್ಥಿಕ ತಾರತಮ್ಯದ ವಿರುದ್ಧ ಹೋರಾಡಿ, ಸಮಾನತೆಯ ತತ್ವ ಸಾರಿದ ಮಹಾನ್ ಸಮಾಜ ಸುಧಾರಕರು, ವಚನಕಾರರಾಗಿದ್ದಾರೆ ಎಂದರು.

ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವದ ಅಡಿಪಾಯ ಹಾಕಿದ ಅವರು, 'ಕಾಯಕವೇ ಕೈಲಾಸ' ಎಂಬ ಮಂತ್ರದ ಮೂಲಕ ಶ್ರಮದ ಗೌರ ವವನ್ನು ಎತ್ತಿ ಹಿಡಿದರು. ಸ್ತ್ರೀ–ಪುರುಷ ಸಮಾನತೆ, ಅಸ್ಪೃಶ್ಯತೆ ನಿರ್ಮೂ ಲನೆ ಮತ್ತು ಮಾನವತಾವಾದದ ಪ್ರತಿಪಾದಕರಾಗಿದ್ದರು ಎಂದರು.

ಮುಖಂಡ ಡಾ.ಎ.ಆರ್.ಬಾಬು ಮಾತನಾಡಿ, ಬಸವಣ್ಣನವರ ಚಿಂತನೆಗಳು. ಬಿಜೆಪಿಯ ನರೇಂ ದ್ರಮೋದಿಯವರ ಚಿಂತನೆಗಳು ಒಟ್ಟಾಗಿ ಎಂದು ಹೇಳಬಹುದು. ಸಮಾನತೆ, ಸಮಾಜ ಸುಧಾರಣೆ, ಆರ್ಥಿಕ ವ್ಯವಸ್ಥೆ, ಆಡಳಿತ ವ್ಯವಸ್ಥೆ, 12ನೇ ಶತ ಮಾನದಲ್ಲಿ ಬಸವಣ್ಣನವರು ಮಾಡಿದರು ಅದನ್ನು ನರೇಂದ್ರಮೋದಿಯವರು ಅಳವಡಿಸಿ ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಸಬ್ ಕಾ ಪ್ರಾಯಾಸ್ ನಿಟ್ಟಿನಲ್ಲಿ. ಕೆಲಸ ಮಾಡುತ್ತಿದ್ದಾರೆ ಎಂದರು.

ಸಾಹಿತಿ ಕೋಡಿಉಗನೆ ಮಂಜುನಾಥ್ ಮಾತ ನಾಡಿ, ಬಸವಣ್ಣನವರ ವಿಚಾರಗಳನ್ನು ಎಲ್ಲಕಾಲಕ್ಕೂ ಪ್ರಸ್ತುತವಾಗಿವೆ. ಅವರ ವಿಚಾರಧಾರೆಗಳನ್ನು ಹೆಚ್ಚು ಹೆಚ್ಚು ಪ್ರಚುರಪಡಿಸಬೇಕು ಎಂದರು.

ಓಬಿಸಿ ಮೋರ್ಚಾದ ರಾಷ್ಟ್ರೀಯ ಕಾರಕಾರಿಣಿ ಸದಸ್ಯ ನೂರೊಂದುಶೆಟ್ಟಿ ಮಾತನಾಡಿ, ಬಸವಣ್ಣನವರು 8ನೇ ವಯಸ್ಸಿನಲ್ಲಿ ಸಮಾನತೆಗಾಗಿ ಹೋರಾಡಿದರು. ಮಹಿಳೆಯರ ಸಮಾನತೆಗಾಗಿ ಪ್ರತಿಪಾದಿಸಿದರು ಎಂದರು.ಚೂಡಾ ಮಾಜಿ ಅಧ್ಯಕ್ಷ ಶಾಂತಮೂರ್ತಿ ಕುಲಗಾಣ ಮಾತನಾಡಿದರು.ಕಾರ್ಯಕ್ರಮದಲ್ಲಿ ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಹಳ್ಳಿಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಬೇಂದ್ರಪ್ಪ, ಹೊನ್ನೂರು ಮಹದೇವಸ್ವಾಮಿ, ನಗರಸಭಾ ಮಾಜಿ ಸದಸ್ಯರಾದ ಶಿವಣ್ಣ, ಕುಮುದಾಕೇಶವಮೂರ್ತಿ, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ನಟರಾಜು, ಎಸ್‌ಟಿ ಮೋರ್ಚಾದ ಉಪಾಧ್ಯಕ್ಷ ಬುಲೆಟ್ ಚಂದ್ರು, ನಗರ ಮಂಡಲ ಪ್ರಧಾನ ಕಾರ್ಯದರ್ಶಿ ಕೂಸಣ್ಣ, ಮಾಧ್ಯಮ್ ಸಂಚಾಲಕ ವೀರೇಂದ್ರ, ಮಾಧ್ಯಮ ಪ್ರಮುಖ್ ಮಂಜುನಾಥ್, ಮಹದೇವಮ್ಮ ಮೇಗಲಹುಂಡಿ, ರಾಜಮ್ಮ, ಕಾರ್ಯಾಲಯ ಕಾರ್ಯದರ್ಶಿ ಪಿ.ರಂಗಸ್ವಾಮಿ, ಮಹೇಶ್, ಮುಖಂಡರಾದ ಕಪಿನಿನಾಯಕ, ಚಂದ್ರಶೇಖರ್, ಶೇಷಪ್ಪಪಾಸ್ವಾನ್, ನಲ್ಲೂರುಪರಮೇಶ್, ಶ್ರೀನಾಥ್ ಅಮಚವಾಡಿ ಮಹಾಶಕ್ತಿ ಕೇಂದ್ರ ಅಧ್ಯಕ ಕಿಲಗೆರೆ ಬೆಳ್ಳಪ್ಪ, ಮಾದಾಪುರ ಮಹಾಶಕ್ತಿಕೇಂದ್ರ ಅಧ್ಯಕ ಭೋಗಾಪುರ ಕುಮಾರಸ್ವಾಮಿ, ಅಂಕಶೆಟ್ಟಿಪುರ ಮಂಜು, ಹೆಗ್ಗೋಠಾರ ಮಂಜುನಾಥ್‌ಇತರರು ಹಾಜರಿದ್ದರು.

## ಜಾತಿ, ವರ್ಗ ರಹಿತ ಸಮಾಜ ನಿರ್ಮಾಣಕ್ಕಾಗಿ ಬಸವಣ್ಣ ಹೋರಾಟ

**ಸಿ.ಪುಟ್ಟರಂಗಶೆಟ್ಟಿ । ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಬಸವೇಶ್ವರ ಜಯಂತಿ**



ಚಾಮರಾಜನಗರ: ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಆಚರಣೆ ಮಾಡಲಾಯಿತು. ಶಾಸಕ ಸಿ. ಪುಟ್ಟರಂಗಶೆಟ್ಟಿ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಬಸವೇಶ್ವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಬಳಿಕ ಮಾತನಾಡಿದ ಶಾಸಕ ಸಿ. ಪುಟ್ಟರಂಗಶೆಟ್ಟಿ, 12 ಶತಮಾನದಲ್ಲಿಯೇ ಬಸವಣ್ಣ, ಜಾತಿ ಹಾಗೂ ವರ್ಗ ರಹಿತ ಸಮಾಜ ನಿರ್ಮಾಣ ಮಾಡಲು ಮುಂದಾಗಿದ್ದರು. ಅದಕ್ಕಾಗಿ ಹೋರಾಟವನ್ನು ಮಾಡಿದ್ದರು. ಅನಿಷ್ಟ ಜಾತಿ ಪದ್ಧತಿ, ಮೌಢ್ಯ ಕಂಚಾಚಾರದ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಿದರು. ರಾಜ್ಯ ಪ್ರಭುತ್ವ ವಿರುದ್ಧವಾಗಿ ಪ್ರಜಾಪ್ರಭುತ್ವವನ್ನು ಅನುಷ್ಠಾನ ಮಾಡಿದ್ದರು. ಇಂಥ ಮಹಾನ್ ದಾರ್ಶನಿಕ ಸಾಂಸ್ಕೃತಿಕ ನಾಯಕ ಬಸವಣ್ಣ ಎಲ್ಲಾ ವರ್ಗದವರಿಗೆ ಸಾಮಾಜಿಕ ನ್ಯಾಯವನ್ನು ಕಲ್ಪಿಸಿದ ಮಹಾಪುರುಷರು. ಅವರ ಅದರ್ಶ ಅದರ್ಶಗಳನ್ನು ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು ಎಂದರು.

ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ ಮಾತನಾಡಿ, ಬಸವಣ್ಣ ಅವರ ತತ್ವ ಅದರ್ಶಗಳು 21ನೇ ಶತಮಾನದಲ್ಲಿ ಹೆಚ್ಚು ಪ್ರಸ್ತುತತೆಯನ್ನು ಹೊಂದಿದೆ. ಸಮಾಜದಲ್ಲಿದ್ದ ಅಸಮಾನತೆಯನ್ನು ತೊಡದೇ ಹಾಕಲು ಪಣ ತೊಟ್ಟು ವಚನ ಚಳವಳಿಯನ್ನು ಆರಂಭಿಸಿದರು. ಎಂದರು. ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆರ್. ಮಹದೇವ್, ಬ್ಲಾಕ್ ಅಧ್ಯಕ್ಷ ಮಹಮದ್ ಅಸ್ಗರ್, ಎಪಿಎಂಸಿ ಅಧ್ಯಕ್ಷ ಗುರುಸ್ವಾಮಿ, ಮಾಜಿ ಅಧ್ಯಕ್ಷ ಸೋಮೇಶ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಕೆಂಗಾಕಿ ನಾಗರತ್ನ, ಮುಖಂಡರಾದ ಸೋಮಣ್ಣ, ಎಸ್. ಸೋಮನಾಯಕ, ಮಾಜಿ ನಗರಸಭಾ ಸದಸ್ಯರಾದ ಚಿನ್ನಮ್ಮ, ಕಲಾವತಿ, ಲತಾ ಜಯಣ್ಣ, ಶಂಕುತಲಾ, ನಾಗಶ್ರೀ, ಬಿಸಲವಾಡಿ ರವಿ,ಚೆಂಗುಮಣಿ , ಶಿವ ಮೂರ್ತಿ, ಇರಸವಾಡಿ ಆಶೋಕ್, ಹೆಬ್ಬಸೂರು ಮಧು, ಎಚ್‌ಎನ್‌ಖಾನ್, ಕೆರೆಹಳ್ಳಿ ರೇವಣ್ಣ, ಎಚ್.ಡಿ. ಪ್ರಕಾಶ್ ಮೊದಲಾದವರು ಇದ್ದರು.

## ಏ.25ಕ್ಕೆ ಮೂರ್ತಿ 80 ಸಂಭ್ರಮ




ಮೈಸೂರು: ಖ್ಯಾತ ವಕೀಲ ಎಚ್.ವಿ.ಎಸ್. ಮೂರ್ತಿ ಅವರ 80ರ ಸಂಭ್ರಮ, ಅಭಿನಂದನೆ ಹಾಗೂ ಅವರ ಹೋರಾಟದ ಅವಲೋಕನ ಕೃತಿ ಬಿಡುಗಡೆ ಸಮಾರಂಭ ಏ. 25 ರ ಬೆಳಗ್ಗೆ 10.30ಕ್ಕೆ ವಿಶ್ವೇಶ್ವರ ನಗರ ಎರಡನೇ ಹಂತದ ಕೆ.ವಿ.ಆರ್ ವೆಡ್ಡಿಂಗ್ ಬೆಲ್ಸ್ ಸಭಾಂಗಣದಲ್ಲಿ ನಡೆಯಲಿದೆ ಎಂದು ವಕೀಲ ಎಂ.ಎಸ್. ರವೀಂದ್ರ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸ್ವಾಮಿ ಸರ್ವಜಯಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಶಾಸಕ ಎ.ಆರ್. ಕೃಷ್ಣಮೂರ್ತಿ ಉದ್ಘಾಟಿಸುವರು, ಶಾಸಕ ಟಿ.ಎಸ್. ಶ್ರೀವತ್ಸ ಅಧ್ಯಕ್ಷತೆ ವಹಿಸುವರು, ಈ ವೇಳೆ ಎಚ್.ವಿ.ಎಸ್. ಮೂರ್ತಿ ಅವರನ್ನು ಅಭಿನಂದಿಸಲಾಗುವುದೆಂದರು. ಶಿವಶಂಕರ್, ಎಂ. ಸುನೀಲ್, ಎಚ್.ವಿ. ರವಿಕಾಂತ್, ಎಚ್.ಎಸ್. ವೀಣಾ ಮೂರ್ತಿ ಇದ್ದರು.

## ವಚನಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಿ



ಹನೂರು: ಬಸವಣ್ಣನವರ ಚಿಂತನೆಗಳು ಸಾರ್ವಕಾಲಿಕವಾದದ್ದು, 12ನೇ ಶತಮಾನದಲ್ಲಿ ಮಾನವ ಕುಲಕ್ಕೆ ಮಾರ್ಗದರ್ಶಕರಾಗಿ ಇಂದು ಕೂಡ ಪ್ರಸ್ತುತವಾಗಿದೆ. ಬಸವಣ್ಣನವರು ಹೇಳಿರುವ ವಚನಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಮಾದರಿ ವ್ಯಕ್ತಿಗಳಾಗಿ ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದು ಬಿಜೆಪಿ ಯುವ ಮುಖಂಡ ನಿಶಾಂತ್ ತಿಳಿಸಿದರು.

ಪಟ್ಟಣದ ನಾಗಪ್ಪ ವೃತ್ತದ ಬಳಿ ಬಸವ ಜಯಂತಿ ಪ್ರಯುಕ್ತ ಜಗಜ್ಯೋತಿ ಬಸವೇಶ್ವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು. ಬಸವಾದಿ ಶರಣರ ಚಿಂತನೆಗಳು ತತ್ವಗಳು ಕೇವಲ ಒಂದು ವರ್ಗಕ್ಕೆ ಒಂದು ಧರ್ಮಕ್ಕೆ ಹಾಗೂ ಒಂದು ದೇಶಕ್ಕೆ ಸೀಮಿತವಾಗಿಲ್ಲ ವಿಶ್ವದ ಪ್ರತಿಯೊಬ್ಬ ಮಾನವನ್ನು ಉದ್ಧಾರವಾಗಬೇಕೆಂಬ ಅವರ ಆಲೋಚನೆಗಳು ಇಂದಿಗೂ ಪ್ರಸ್ತುತವಾಗಿದೆ ಎಂದರು.

ಬಸವಣ್ಣ ರವರು ಸಕಲ ಜೀವರಾಶಿಗಳಿಗೆ ಒಳ್ಳೆಯದನ್ನೇ ಬಯಸಿ ಎಂದು ಹೇಳಿದ್ದಾರೆ ಬಸವಣ್ಣನವರ ಕಾಲದಲ್ಲಿ ನೆನಪಾಗುವ ಎರಡು ಪ್ರಮುಖ ಅಂಶಗಳೆಂದರೆ ಕಾಯಕ ಮತ್ತು ದಾಸೋಹ ಕಾಯಕದಲ್ಲಿ ಯಾವುದೇ ಮೇಲು ಕೀಳು ಇಲ್ಲ ದಾಸೋಹವು ಪರಸ್ಪರ ನೀಡುವ ತೆಗೆದುಕೊಳ್ಳುವ ಸಮಾನತೆಯ ಸಂಕೇತವಾಗಿದೆ ಬಸವಣ್ಣನವರ ದೃಷ್ಟಿಯಲ್ಲಿ ಕೆಲಸ ಎನ್ನುವುದು ಕಾಯಕವಾದರೆ ದಾನ ಎನ್ನುವುದು ದಾಸೋಹವಾಯಿತು ಎಂದು ಬಣ್ಣಿಸಿದರು. ಅಖಿಲ ಭಾರತ ವೀರಶೈವ ಸಮಾಜದ ತಾಲೂಕು ಅಧ್ಯಕ್ಷ ಸೋಮಶೇಖರ್ ಮಾತನಾಡಿ ಬಸವಣ್ಣರವರನ್ನು ಜಗ ಜ್ಯೋತಿ ಎಂದು ಕರೆಯುತ್ತೇವೆ. ಅವರ ಆದರ್ಶಗಳು ಚಿಂತನೆಗಳು ಅಪಾರವಾದದ್ದು ಸಮುದ್ರದಲ್ಲಿ ಒಂದು ಕೂಡ ನೀರು ತೆಗೆದರು ಅದು ಖಾಲಿಯಾಗುವುದಿಲ್ಲ ಅವರು ದೇವರಂತೆ ಎಂದು ತಿಳಿಸಿದರು. ನಮ್ಮ ಜೀವನದಲ್ಲಿ ಒಂದೇ ಒಂದು ಸಾಧನೆ ಮಾಡುತ್ತಾ ಹೋಗುತ್ತೇವೆ ಆದರೆ ಬಸವಣ್ಣನವರದ್ದು ಸಮತೋಲನದ ವ್ಯಕ್ತಿತ್ವ ಇವರು ರಾಜಕೀಯ ಕ್ಷೇತ್ರದಲ್ಲಿಯೂ ಸಹ ಇದ್ದರು ಉತ್ತಮ ಆಡಳಿತಗಾರರಾಗಿ ಸಾಮಾಜಿಕ ಸುಧಾರಣೆ ತಂದರು. ಸರಿ ಸಮಾನತೆಯ ಮೂಲಕ ಜಾತಿ ಪದ್ಧತಿ ನಿರ್ಮೂಲನೆ ಮಾಡುವ ಮೂಲಕ ಆಧ್ಯಾತ್ಮಿಕತೆಯಲ್ಲೂ ಅವರ ಸೇವೆ ಅಪಾರವಾದದ್ದು ಎಂದರು. ಇದೇ ವೇಳೆ ವೀರಶೈವ ಮಹಾಸಭಾದ ನಿರ್ದೇಶಕ ಮುರುಡೇಶ್ವರ ಸ್ವಾಮಿ , ತಾಲ್ಲೂಕು ಮಾಜಿ ಅಧ್ಯಕ್ಷ ಬಸವರಾಜಪ್ಪ, ಖಜಾಂಚಿ ಜಗದೀಶ್,ಶಾಗ್ಯ ರವಿ, ಮಲ್ಲೇಶ್, ಮೋಹನ್, ಹರೀಶ್, ಪುಟ್ಟಸ್ವಾಮಿ, ರಮೇಶ್, ನಟರಾಜು ಸೇರಿದಂತೆ ಇನ್ನಿತರರು ಇದ್ದರು.

**ತಾಲ್ಲೂಕು ಪಂಚಾಯತ್ ಆವರಣದಲ್ಲಿ ಆಯೋಜನೆ**

# ಕೆ.ಆರ್.ಪೇಟೆ: 'ಮುಟ್ಟಿನ ಕಪ್' ವಿತರಣಾ ಕಾರ್ಯಕ್ರಮ



ಕೆ.ಆರ್.ಪೇಟೆ: ತಾಲ್ಲೂಕು ಪಂಚಾಯತ್ ಕಾರ್ಯಾಲಯದ ವತಿಯಿಂದ ಶನಿವಾರ ತಾಲ್ಲೂಕು ಪಂಚಾಯತ್ ಆವರಣದಲ್ಲಿ ವಿಶೇಷ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು, ಸಮಾರಂಭದಲ್ಲಿ 'ಮುಟ್ಟಿನಿ ಕಪ್' ವಿತರಣೆ ಮಾಡಲಾಯಿತು. ಮಾನ್ಯ ಶಾಸಕರು ಹೆಚ್.ಟಿ. ಮಂಜು ರವರ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮ ನೆಡೆಸಲಾಯಿತು ಹಾಗೂ ಗಿಡಕ್ಕೆ ನೀರನ್ನು ಹಾಕುವಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು.

ಶಾಸಕರು ಹೆಚ್.ಟಿ ಮಂಜು ಅವರು ಮಾತನಾಡಿ ಮಹಿಳೆಯರು ಮುಟ್ಟಿನ ಕಪ್ ನ್ನು ಉಪಯೋಗಿಸುವುದರಿಂದ ಆರೋಗ್ಯವನ್ನು ಮತ್ತು ನೈರ್ಮಲ್ಯತೆಯನ್ನು ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು ತಾಲೂಕಿನಾದ್ಯಂತ ಆಯ್ಕೆಯಾದ ಮಹಿಳಾ ಫಲಾನುಭವಿಗಳಿಗೆ ಮುಟ್ಟಿನಿ ಕಪ್ ವಿತರಣೆ ಮಾಡಿದರು ಮತ್ತು ಅಂಗವಿಕಲರು ಎಲ್ಲರ ರೀತಿ ಆತ್ಮಸ್ಥೈರ್ಯ ಬೆಳೆಸಿಕೊಂಡು ಎಲ್ಲರಂತೆ ಬದುಕಲು ಸರ್ಕಾರ ಈ ಯೋಜನೆ ಜಾರಿಗೆ ತಂದಿದೆ ಎಂದು ತಿಳಿಸಿದರು, ನಂತರ ಅಂಗವಿಕಲರಿಗೆ ತ್ರಿಚಕ್ರ ವಾಹನವನ್ನು ವಿತರಿಸಿದರು. ರಾಜ್ಯ ಕೈ ಮಗ್ಗ ನಿಗಮದ ಅಧ್ಯಕ್ಷರಾದ ನಾಗೇಂದ್ರ ಕುಮಾರ್ ಅಂಗವಿಕಲರು ಎಲ್ಲರಂತೆ ಜೀವನ ನೆಡೆಸಲು ಈ ಯೋಜನೆ ಸಹಕಾರಿ ಆಗಿದೆ ಹಾಗೂ ಮುಟ್ಟಿನ ಕಪ್ ಬಳಸುವುದರಿಂದ ಮಹಿಳೆಯರು ನೈರ್ಮಲ್ಯತೆ ಕಾಪಾಡಲು ಸಹಕಾರಿ ಆಗಿದೆ ಎಂದರು.

ತಾಲ್ಲೂಕು ಪಂಚಾಯತ್ 5ನೇ ಹಣಕಾಸು ಆಯೋಗದ 5% ಅನಿರ್ಬಂದಿತ ಅನುದಾನದಲ್ಲಿ ಮಹಿಳೆಯರ ಸಬಲೀಕರಣಕ್ಕೆ ಮೀಸಲಿಡಲಾದ ಅನುದಾನದಲ್ಲಿ ಕೆ.ಆರ್.ಪೇಟೆ ತಾಲ್ಲೂಕಿನ ಆಶಾ ಕಾರ್ಯಕರ್ತೆಯರು ಅಂಗನವಾಡಿ ಕಾರ್ಯಕರ್ತೆಯರು ಎನ್.ಆರ್.ಎಲ್.ಎಂ ಸಿಬ್ಬಂದಿಗಳು ಸರ್ಕಾರಿ ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ಮಹಿಳಾ ಗ್ರಾಮ ಪಂಚಾಯತಿ ಸದಸ್ಯರುಗಳಿಗೆ ತರಬೇತಿ ನೀಡಿ ಟೆಂಡರ್ ಮೂಲಕ 2670 ಮುಟ್ಟಿನ ಕಪ್ ಖರೀದಿ ಮಾಡಿ ವಿತರಣೆ ಮಾಡುತಿದ್ದೇವೆ ಹಾಗೂ ಅಂಗವಿಕಲರ 5% ಅನುದಾನದಲ್ಲಿ ಅಂಗವಿಕಲರಿಗೆ ತ್ರಿಚಕ್ರ ವಾಹನವನ್ನು 10 ಜನರಿಗೆ ತಾಲೂಕಿನಲ್ಲಿ ಖರೀದಿ ಮಾಡಿ ವಿತರಣೆ ಮಾಡುತ್ತಿದ್ದೇವೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಸುಷ್ಮಾ.ಕೆ ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳು ಸುಷ್ಮಾ.ಕೆ , ತಾಲ್ಲೂಕು ಆರೋಗ್ಯ ಅಧಿಕಾರಿಗಳು ಅಜಿತ್.ಜೆ, ತಾಲ್ಲೂಕು ಯೋಜನಾಧಿಕಾರಿಗಳು ಶ್ರೀನಿವಾಸ್ , ನರೇಗಾ ಸಹಾಯಕ ನಿರ್ದೇಶಕರು ನವೀನ್ , ಸಹಾಯಕ ನಿರ್ದೇಶಕರು (ಪಂ.ರಾ) ವಿನೋದ್ ತಾಲ್ಲೂಕು ಪಂಚಾಯತ್ ವ್ಯವಸ್ಥಾಪಕರು ಅನಿಲ್ ಬಾಬು, ತಾಲ್ಲೂಕು ಪಂಚಾಯತ್ ಸಹಾಯಕ ಲೆಕ್ಕಧಿಕಾರಿಗಳು ಶಂಕರ್, ಮುಟ್ಟಿನ ಕಪ್ ವಿತರಣೆ ಮಾಡಿದರು, ತಾಲ್ಲೂಕು ಪಂಚಾಯತ್ ವಿಷಯ ನಿರ್ವಾಹಕರು ಕುಮಾರ್, ನಂದಿನಿ,ರವರು ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಹಾಗೂ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಎಂ.ಬಿ.ಕೆ, ಎಲ್.ಸಿ.ಆರ್.ಪಿ , ಕೃಷಿ ಸಖಿ ಮತ್ತು ಪಶು ಸಖಿಯರು, ತಾಲ್ಲೂಕು ಎನ್.ಆರ್.ಎಲ್.ಎಂ. ಸಿಬ್ಬಂದಗಳು ಹಾಗೂ ತಾಲ್ಲೂಕು ಪಂಚಾಯತ್ ಸಿಬ್ಬಂದಿಗಳು, ವಿಶೇಷ ಚೇತನರ ಜಿಲ್ಲಾಧ್ಯಕ್ಷರು ಮಂಜು, ಹಾಜರಿದ್ದರು.

# ಕನ್ನಡಿ ಕಾಯಕದ ಅಮ್ಮಿದೇವಯ್ಯ



| ವೀಣಾ ಹೇಮಂತ್‌ಗೌಡ ಪಾಟೀಲ್


ಉಪೇಕ್ಷಿತ ವಚನಕಾರರು

ಬಸವಾದಿ ಶಿವ ಶರಣರ ಕಾಯಕ ತತ್ವಕ್ಕೆ ಮೆರುಗನ್ನು ನೀಡಿದ ಶರಣರಲ್ಲಿ ಒಬ್ಬರು ಕನ್ನಡಿ ಕಾಯಕದ ಅಮ್ಮಿ ದೇವಯ್ಯ. ತಮ್ಮ ಕಾಯಕದಲ್ಲಿ ದೈವವನ್ನು ಹುಡುಕಿ ಅದರ ಮೂಲಕ ಆಧ್ಯಾತ್ಮಿಕ ಬದುಕಿನ ಉತ್ತುಂಗವನ್ನು ಕಂಡುಕೊಂಡವರು. ಅಂದಿನ ಕಾಲದ ಉಳಿದೆಲ್ಲಾ ಶರಣರಂತೆ ಅವರು ತಮ್ಮ ಕಾಯಕವನ್ನೇ ತಮ್ಮ ಅಡ್ಡ ಹೆಸರನ್ನಾಗಿ ಹೊಂದಿದವರು. ಅವರ ಕಾಯಕ ಕನ್ನಡಿಯನ್ನು ಹಿಡಿಯುವುದು ಹಾಗೂ ಕ್ಷೌರ ಮಾಡುವುದು.

ಕ್ಷೌರ ಮಾಡಿಸಿಕೊಳ್ಳುವುದು ಪ್ರತಿಯೊಬ್ಬ ವ್ಯಕ್ತಿಗೆ ಅನಿವಾರ್ಯವಾದರೂ, ಕ್ಷೌರಿಕರಿಲ್ಲದೆ ತಮ್ಮ ಬದುಕು ನಡೆಯುವುದಿಲ್ಲ ಎಂಬುದು ಗೊತ್ತಿದ್ದರೂ ಕೂಡ ಕ್ಷೌರ ವೃತ್ತಿಯನ್ನು ಕೈಗೊಳ್ಳುವವರನ್ನು ಅತ್ಯಂತ ಕೀಳಾಗಿ ನೋಡುತ್ತಿದ್ದ ಅಂದಿನ ಕಾಲದಲ್ಲಿ ಅಣ್ಣ ಬಸವಣ್ಣನವರು ಅಮ್ಮಿದೇವಯ್ಯನವರಿಗೆ ಅನುಭವ ಮಂಟಪದಲ್ಲಿ ಸಮಾನ ಸ್ಥಾನವನ್ನು ನೀಡಿ ಗೌರವಿಸಿದ್ದರು.. ಅದೊಂದು ಕ್ರಾಂತಿಕಾರಕ ನಡೆಯಾಗಿತ್ತು. ಮುಂದೆ ಅಮ್ಮಿದೇವಯ್ಯನವರು ತಮ್ಮ ನಡೆ-ನುಡಿಗಳ ಮೂಲಕ ಅನುಭವ ಮಂಟಪದ ಮುಖ್ಯಸ್ಥರಲ್ಲಿ ಒಬ್ಬರಾಗಿದ್ದರು.

ತಮ್ಮ ಕಾಯಕ ತತ್ವದ ಮೂಲ ಉದ್ದೇಶವನ್ನು ಬಳಸಿಕೊಂಡು ಕೆಲವು ವಚನಗಳನ್ನು ರಚಿಸಿದ ಅಮ್ಮಿದೇವಯ್ಯನವರು ತಾವು ತಮ್ಮ ಕಾಯಕದಲ್ಲಿ ಬಳಸುವ ಕನ್ನಡಿಯು ಕೇವಲ ಮುಖದ ಪ್ರತಿಬಿಂಬವನ್ನು ನೋಡುವ ಸಾಧನವಲ್ಲ ಬದಲಾಗಿ ನಮ್ಮ ಅಂತರಂಗದ ಕೊಳೆಯನ್ನು ತೊಡೆದು ಪರಶಿವನನ್ನು ಕಾಣುವ ಸಾಧನವಾಗಬೇಕು ಎಂದು ದೃಢವಾಗಿ ನಂಬಿದ್ದರು.

ಅಮ್ಮಿ ದೇವಯ್ಯನವರ ವಚನಗಳಲ್ಲಿ ಶರಣರ ಕಾಯಕದ ಕುರಿತಾದ ಗೌರವ ಮತ್ತು ಭಕ್ತಿಯನ್ನು ನಾವು ನೋಡಬಹುದು



ಬಹುತೇಕ ಶರಣರಂತೆ ಅಮ್ಮಿ ದೇವಯ್ಯನವರು ಕೂಡ ತಮ್ಮ ಕಾಯಕದ ಉಪಕರಣಗಳನ್ನು ಆಧ್ಯಾತ್ಮಿಕ ಸಂಕೇತಗಳಾಗಿ ಪರಿವರ್ತಿಸಿ

ವಚನಗಳನ್ನು ರಚಿಸಿದ್ದಾರೆ ಇವರ ವಚನಗಳ ಅಂಕಿತನಾಮ ಚನ್ನಬಸವಣ್ಣ ಪ್ರಿಯ ಕಮಳೇಶ್ವರ ಲಿಂಗ. ಇವರ ಒಂದು ವಚನ ಹೀಗಿದೆ

**ಎಲ್ಲ ಕನ್ನಡಿ ಒಳ ಹೊರಗಿಲ್ಲ**
**ಎನ್ನ ಘಳಿಹ ಮುಟ್ಟನೊಳಕೊಂಡ**
**ಚಿರಹಡಪಕ್ಕೆ ಅಳವಲ್ಲ**
**ಕತ್ತಿಯ ಬಸವಣ್ಣ ಕೊಟ್ಟ**
**ಕತ್ತರಿಯ ಚನ್ನಬಸವಣ್ಣ ಕೊಟ್ಟ**
**ಕಿತ್ತು ಹಾಕುವ ಚಿಮ್ಮಟಿಕೆಯ ಪ್ರಭುರಾಯ ಕೊಟ್ಟ**
**ಮಿಕ್ಕಾದ ಎನ್ನಯ ಮುಟ್ಟ ಸತ್ಯ ಶರಣರು ಕೊಟ್ಟರು ದೃಷ್ಟವತೋರಿ ಅಡಗುವ**
**ಮುಕುರವ ಕೊಟ್ಟವರ ಹೇಳುವೆನು**
**ದೃಷ್ಟ ಪ್ರಸಿದ್ಧ ಅಪ್ರತಿಮ ಪ್ರಸನ್ನ**
**ಚನ್ನಬಸವಣ್ಣ ಪ್ರಿಯ ಕಮಳೇಶ್ವರ ಲಿಂಗವು**
**ಎನಗೆ ದೃಷ್ಟವ ಕೊಟ್ಟು ತಾ ಬೆಳಗಿನೊಳಗಾದ**

ತಾನು ತನ್ನದು ಎಂಬ ಅಹಂಕಾರವನ್ನು ಅಳಿಸಲು ಬಸವಣ್ಣನವರು ಕತ್ತಿಯನ್ನು ನೀಡಿದರು

ಕತ್ತರಿಯನ್ನು ಚೆನ್ನಬಸವಣ್ಣ ಚಿಮ್ಮಟಿಕೆಯನ್ನು ಅಲ್ಲಮಪ್ರಭುಗಳು ನೀಡಿದ್ದು ಅಂದಿನ ಆ ಮಹಾನ್ ಕಾಯಕ ಶರಣರ ಮಾರ್ಗದರ್ಶನದಲ್ಲಿ ಕಾಯಕ ಮಾಡುತ್ತಿರುವ ಕುರಿತು ಅತ್ಯಂತ ಹೆಮ್ಮೆಯಿಂದ ಅಮ್ಮಿದೇವಯ್ಯನವರು ತಮ್ಮ ವಚನದಲ್ಲಿ ಹೇಳಿಕೊಂಡಿದ್ದಾರೆ

ಇವರು "ಅಪ್ರತಿಮ ಪ್ರಸನ್ನ ಚೆನ್ನಬಸವಣ್ಣ ಪ್ರಿಯ ಕಮಳೇಶ್ವರಲಿಂಗ" ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾರೆ. ಪ್ರಸ್ತುತ ಇವರ ಹತ್ತು ವಚನಗಳು ಲಭ್ಯವಿವೆ. ಇವರ ವಚನಗಳಲ್ಲಿ ಪಾರಿಭಾಷಿಕ ಶಬ್ದಗಳು ಮತ್ತು ವೃತ್ತಿ ಸಂಬಂಧಿತ ರೂಪಕಗಳು ಹೆಚ್ಚಾಗಿ ಕಂಡುಬರುತ್ತವೆ. "ಎನ್ನ ಕನ್ನಡಿ ಒಳ ಹೊರಗಿಲ್ಲ" ಎನ್ನುವ ಮೂಲಕ ಅವರು ಸಕಲ ಜೀವಗಳಲ್ಲೂ ಇರುವ ಪರಮಾತ್ಮನ ಅರಿವನ್ನು ಸಾರುತ್ತಾರೆ.

ಕನ್ನಡಿಕಾಯಕದ ಅಮ್ಮಿದೇವಯ್ಯನವರು ಕಾಯಕ ಮತ್ತು ಭಕ್ತಿ ಹೇಗೆ ಒಂದಕ್ಕೊಂದು ಪೂರಕವಾಗಿವೆ ಎಂಬುದನ್ನು ತೋರಿಸಿಕೊಟ್ಟವರು. ಮೇಲು-ಕೀಳು ಎಂಬ ಭೇದವಿಲ್ಲದ ಸಮ ಸಮಾಜವನ್ನು ನಿರ್ಮಿಸುವಲ್ಲಿ ಇಂತಹ ಶರಣರ ಪಾತ್ರ ದೊಡ್ಡದಿದೆ. ವೃತ್ತಿ ಯಾವುದೇ ಇರಲಿ, ನಿಷ್ಠೆ ಮತ್ತು ಸತ್ಯವಿದ್ದರೆ ಅದು ಮುಕ್ತಿಗೆ ಹಾದಿಯಾಗುತ್ತದೆ ಎಂಬುದು ಇವರ ಜೀವನದ ಸಂದೇಶವಾಗಿದೆ.

ಅವರ ಕಾಯಕದಲ್ಲಿ ಬಳಸುವ ವಸ್ತುಗಳನ್ನು ಅವರು ಉಪಮೆಗಳನ್ನಾಗಿ ಬಳಸಿ ವಚನಗಳನ್ನು ರಚಿಸಿದ್ದು ಅದರಲ್ಲಿ ಕ್ಷೌರದ ಪೆಟ್ಟಿಗೆ,ಕನ್ನಡಿ, ಕತ್ತಿ ಹರಿತವಾದ ಅಲುಗಿನ ಕತ್ತರಿಗಳ ಮೂಲಕ ತಮ್ಮ ಆಧ್ಯಾತ್ಮಿಕ ಸಂದೇಶವನ್ನು ಅರುಹಿದ್ದಾರೆ.

ತಮ್ಮ ಕ್ರಿಯೆ ಮತ್ತು ಭಕ್ತಿಯ ಮೂಲಕ ತತ್ವವನ್ನು ಸಾರಿದ ಅವರು ಭಕ್ತನೊಬ್ಬನ ಕಾಯಕವೇ ಆತನ ಭಕ್ತಿಯ ಸಿದ್ಧಿಯನ್ನು ತೋರಬೇಕು. ಕಾಯಕವೆಂದು ಜಾತಿವಾಚಕವಾಗಿರಬಾರದು. ಹುಟ್ಟು ಮತ್ತು ಕಾಯಕದಿಂದ ಜಾತಿಯನ್ನು ಯಾರೂ ಗುರುತಿಸಬಾರದು ಎಂದು ಹೇಳಿದ್ದಾರೆ.

ಅಮ್ಮಿದೇವಯ್ಯನವರಿಗೆ ಆಯುರ್ವೇದ ಔಷಧಿಗಳ ಕುರಿತು ಕೂಡ ಅಪಾರ ಜ್ಞಾನವಿದ್ದು ಈ ಕುರಿತು ಅವರ ವಚನಗಳಲ್ಲಿ ಕಾಣಬಹುದು. ಅತ್ಯಂತ ಸರಳವಾದ ಅವರ ವಚನಗಳಲ್ಲಿ ಕನ್ನಡಿಯನ್ನು ನಮ್ಮ ಮೆದುಳಿಗೆ ಹಾಗೂ ಲಿಂಗಕ್ಕೆ ಹೋಲಿಸಿದ್ದಾರೆ. ಆಧ್ಯಾತ್ಮಿಕ ಅರಿವಿದ್ದ ವ್ಯಕ್ತಿಯ ಮನಸ್ಸು ಮತ್ತು ಬುದ್ಧಿ ಸಂಪೂರ್ಣ ಶುದ್ಧವಾಗಿರಬೇಕು ಭಾವ ಶುದ್ಧವಾಗಿರಬೇಕು. ಲೌಕಿಕದ ವಿಷಯಗಳು ಅವರಲ್ಲಿ ಭ್ರಾಂತಿಯನ್ನು ಹುಟ್ಟಿಸಲು ಸಾಧ್ಯವಿಲ್ಲ ಎಂದು ಅವರು ಹೇಳುತ್ತಾರೆ.

**ಕಾಯಕನಿಷ್ಠ ಯೋಗಿ ಅಮ್ಮಿದೇವಯ್ಯನವರಿಗೆ ಶರಣು**

# ಭಾರತದ ಆಧ್ಯಾತ್ಮಿಕ ಪುನರುತ್ಥಾನ ಮಾಡಿದ ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯರು

**ಶಂಕರ ಜಯಂತಿಯ ಹಿನ್ನೆಲೆ :** ಆದಿ ಶಂಕರಾಚಾರ್ಯರ ಜನ್ಮದಿನವನ್ನು ಪ್ರತಿವರ್ಷ ಹಿಂದೂ ಚಾಂದ್ರಮಾನ ಕ್ಯಾಲೆಂಡರ್‌ನ ವೈಶಾಖ ಮಾಸದ ಶುಕ್ಲ ಪಕ್ಷದ ಪಂಚಮಿ ತಿಥಿಯಂದು ಆಚರಿಸಲಾಗುತ್ತದೆ. ಈ ದಿನವನ್ನು 'ಶಂಕರ ಜಯಂತಿ' ಎಂದು ಕರೆಯಲಾಗುತ್ತಿದ್ದು, ಇದು ಭಾರತೀಯ ಸನಾತನ ಧರ್ಮದ ಪುನರುತ್ಥಾನದ ಸಂಕೇತವಾಗಿದೆ.

ಶಂಕರ ಜಯಂತಿಯನ್ನು ಇಡೀ ದೇಶಾದ್ಯಂತ ಒಂದು ಮಹೋತ್ಸವವಾಗಿ ಜನಪ್ರಿಯಗೊಳಿಸಿದ ಕೀರ್ತಿ ಶೃಂಗೇರಿ ಶಾರದಾ ಪೀಠದ 33ನೇ ಜಗದ್ಗುರುಗಳಾದ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತಿ ಮಹಾಸ್ವಾಮಿಗಳಿಗೆ ಸಲ್ಲುತ್ತದೆ. ಇವರನ್ನು 'ಅಭಿನವ ಶಂಕರ' ಎಂದೇ ಕರೆಯಲಾಗುತ್ತಿತ್ತು.

**ಶಂಕರ ಜಯಂತಿಯನ್ನು ಜನಪ್ರಿಯಗೊಳಿಸಲು ಅವರು ಕೈಗೊಂಡ ಪ್ರಮುಖ ಕ್ರಮಗಳು:**

- **ಕಾಲಟಿಯ ಶೋಧ:** ಶಂಕರಾಚಾರ್ಯರು ಜನಿಸಿದ ಕೇರಳದ ಕಾಲಟಿಯು ಕಾಲಕ್ರಮೇಣ ಮರೆತುಹೋಗಿತ್ತು. ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತಿ ಸ್ವಾಮಿಗಳೇ ತಮ್ಮ ತಪೋಶಕ್ತಿಯಿಂದ ಆ ಸ್ಥಳವನ್ನು ಗುರುತಿಸಿ, ಅಲ್ಲಿ ಶಂಕರರ ಮತ್ತು ಶಾರದಾಂಭೆಯ ದೇವಾಲಯಗಳನ್ನು ನಿರ್ಮಿಸಿದರು.
- **ಸರ್ವವ್ಯಾಪಿ ಆಚರಣೆ:** 1910ರಲ್ಲಿ ಕಾಲಟಿಯಲ್ಲಿ ಶಂಕರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸುವ ಮೂಲಕ, ಈ ಹಬ್ಬವನ್ನು ಕೇವಲ ಮಠಕ್ಕೆ ಸೀಮಿತಗೊಳಿಸದೆ ಸಾರ್ವತ್ರಿಕಗೊಳಿಸಿದರು. ಅಂದಿನಿಂದ ಭಾರತದಾದ್ಯಂತ ಶಂಕರ ಜಯಂತಿ ಆಚರಣೆ ಚಾಲ್ತಿಗೆ ಬಂದಿತು.
- **ಶಂಕರ ಗ್ರಂಥಾವಳಿ:** ಶಂಕರರ ಎಲ್ಲಾ ಕೃತಿಗಳನ್ನು ಕ್ರೋಢೀಕರಿಸಿ 'ಶಂಕರ ಗ್ರಂಥಾವಳಿ' ಎಂಬ ಹೆಸರಿನಲ್ಲಿ ಪ್ರಕಟಿಸುವ ಮೂಲಕ ಅವರ ತತ್ವಗಳು ಸಾಮಾನ್ಯ ಜನರಿಗೆ ಲಭ್ಯವಾಗುವಂತೆ ಮಾಡಿದರು.



**ಆದಿ ಶಂಕರಾಚಾರ್ಯರು :** ಭಾರತದ ಸುದೀರ್ಘ ಇತಿಹಾಸದಲ್ಲಿ ಸನಾತನ ಧರ್ಮವು ಅನೇಕ ಏರಿಳಿತಗಳನ್ನು ಕಂಡಿದೆ. ಆದರೆ ಎಂಟನೇ ಶತಮಾನದ ಕಾಲಘಟ್ಟವು ಅತ್ಯಂತ ನಿರ್ಣಾಯಕವಾಗಿತ್ತು. ಅಂದು ಧರ್ಮವು ಕೇವಲ ಆಚರಣೆಗಳಿಗೆ ಸೀಮಿತವಾಗಿ, ನೂರಾರು ಬಾಹ್ಯ ಪಂಥಗಳು ಮತ್ತು ಅಂಧಶ್ರದ್ಧೆಗಳಿಂದ ಸಮಾಜವು ಜರ್ಜರಿತವಾಗಿತ್ತು. ಅಂತಹ ಸಂಧಿಕಾಲದಲ್ಲಿ, ದಕ್ಷಿಣ ಭಾರತದ ಕೇರಳದ ಕಾಲಟಿಯಲ್ಲಿ ಜನಿಸಿದ ಬಾಲಕ ಶಂಕರರು ಕೇವಲ 32 ವರ್ಷಗಳ ಜೀವಿತಾವಧಿಯಲ್ಲಿ ಭಾರತದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಭೂಪಟವನ್ನೇ ಬದಲಿಸಿದರು. ಅವರು ಕೇವಲ ಒಬ್ಬ ದಾರ್ಶನಿಕರಲ್ಲ, ಅವರು ಭಾರತವೆಂಬ ಈ ರಾಷ್ಟ್ರದ ಭಾವನಾತ್ಮಕ ಮತ್ತು ವೈಚಾರಿಕ ಶಿಲ್ಪಿ

**ಬಾಲ್ಯ, ಸನ್ಯಾಸ ಮತ್ತು ಗುರು ಪರಂಪರೆ :** ಶಂಕರರ ಜೀವನವು ಅದ್ಭುತಗಳ ಸರಮಾಲೆ. ಶಿವಗುರು ಮತ್ತು ಆರ್ಯಾಂಬೆಯ ಮಗನಾಗಿ ಜನಿಸಿದ ಇವರು ಬಾಲ್ಯದಲ್ಲಿಯೇ ವೇದ-ಉಪನಿಷತ್ತುಗಳನ್ನು ಕರಗತ ಮಾಡಿಕೊಂಡಿದ್ದರು. ತಂದೆಯ ನಿಧನದ ನಂತರ ಲೌಕಿಕ ಜೀವನದಲ್ಲಿ ಆಸಕ್ತಿ ಕಳೆದುಕೊಂಡ ಶಂಕರರು ಸನ್ಯಾಸ ಸ್ವೀಕರಿಸಲು ನಿರ್ಧರಿಸಿದರು. ಮೊಸಳೆಯ ಘಟನೆಯ ಮೂಲಕ ತಾಯಿಯ ಅನುಮತಿ ಪಡೆದ ಅವರು, ತಮ್ಮ ಗುರುವಿನ ಹುಡುಕಾಟದಲ್ಲಿ ನರ್ಮದಾ ನದಿಯ ತೀರಕ್ಕೆ ಬಂದರು.

**ಅದ್ವೈತ ಗುರು ಪರಂಪರೆ: ಶಂಕರರ ಜ್ಞಾನದ ಮೂಲವು ಅವರ ಗುರು ಪರಂಪರೆಯಲ್ಲಿದೆ.**

- ಗೌಡಪಾದಾಚಾರ್ಯರು: ಇವರು ಶಂಕರರ ಪರಮಗುರುಗಳು. ಇವರ 'ಮಾಂಡೂಕ್ಯ ಕಾರಿಕೆ'ಯು ಅದ್ವೈತ ಸಿದ್ಧಾಂತಕ್ಕೆ ಬೌದ್ಧಿಕ ತಳಹದಿಯನ್ನು ನೀಡಿತು. ಇವರು ಪ್ರತಿಪಾದಿಸಿದ 'ಅಜಾತವಾದ' (ಯಾವುದೂ ಹುಟ್ಟಿಲ್ಲ, ಎಲ್ಲವೂ ಬ್ರಹ್ಮವೇ ಎಂಬ ತತ್ವ) ಶಂಕರರ ಮೇಲೆ ಅಪಾರ ಪ್ರಭಾವ ಬೀರಿತ್ತು.
- ಗೋವಿಂದ ಭಗವತ್ಪಾದರು: ನರ್ಮದಾ ತೀರದಲ್ಲಿ ಶಂಕರರಿಗೆ ಸನ್ಯಾಸ ದೀಕ್ಷೆ ನೀಡಿದ ನೇರ ಗುರುಗಳು. "ನೀನು ಯಾರು?" ಎಂಬ ಗುರುಗಳ ಪ್ರಶ್ನೆಗೆ ಶಂಕರರು ನೀಡಿದ 'ನಿರ್ವಾಣ ಷಟ್ಕಂ' ಉತ್ತರವು "ನಾನು ದೇಹವಲ್ಲ, ಮನಸ್ಸಲ್ಲ, ಬದಲಿಗೆ ಚಿದಾನಂದ ರೂಪವಾದ ಶಿವ" ಎಂಬ ಸಾರಾಂಶವನ್ನು ಹೊಂದಿತ್ತು.

**2. ಸಾಹಿತ್ಯ ಕೃತಿಗಳು ಮತ್ತು ಜ್ಞಾನದ ಗಣಿ : ಶಂಕರಾಚಾರ್ಯರ ಸಾಹಿತ್ಯವು ಬೌದ್ಧಿಕ ತರ್ಕ ಮತ್ತು ಭಾವನಾತ್ಮಕ ಭಕ್ತಿಯ ಸುಂದರ ಸಂಗಮವಾಗಿದೆ.**

- ಪ್ರಸ್ಥಾನತ್ರಯ ಭಾಷ್ಯಗಳು: ಉಪನಿಷತ್ತುಗಳು, ಬ್ರಹ್ಮಸೂತ್ರಗಳು ಮತ್ತು ಭಗವದ್ಗೀತೆಗೆ ಅವರು ಬರೆದ ವ್ಯಾಖ್ಯಾನಗಳು ಸನಾತನ ಧರ್ಮದ ಅಡಿಪಾಯ. ಅತ್ಯಂತ ಕ್ಲಿಷ್ಟವಾದ ವೇದಗಳ ರಹಸ್ಯವನ್ನು ಅವರು ಸಾಮಾನ್ಯ ಜನರಿಗೂ ಅರ್ಥವಾಗುವಂತೆ ತರ್ಕಬದ್ಧವಾಗಿ ವಿವರಿಸಿದರು.
- ಪ್ರಕರಣ ಗ್ರಂಥಗಳು: ವೇದಾಂತದ ಸಾರವನ್ನು ತಿಳಿಸಲು 'ವಿವೇಕಚೂಡಾಮಣಿ', 'ಆತ್ಮಬೋಧ', 'ದೃಗ್-ದೃಶ್ಯ ವಿವೇಕ' ಮತ್ತು 'ಉಪದೇಶ ಸಾಹಸ್ರಿ'ಯಂತಹ ಕೃತಿಗಳನ್ನು ನೀಡಿದರು. 'ವಿವೇಕಚೂಡಾಮಣಿ'ಯನ್ನು ಆಧ್ಯಾತ್ಮಿಕ ಸಾಧಕನ ಕೈಪಿಡಿ ಎಂದು ಕರೆಯಲಾಗುತ್ತದೆ.
- ಸ್ತೋತ್ರ ಸಾಹಿತ್ಯ: ಪಾಂಡಿತ್ಯದ ಜೊತೆಗೆ ಭಕ್ತಿಯ ಮಹತ್ವವನ್ನು ಅವರು 'ಸೌಂದರ್ಯ ಲಹರಿ', 'ಶಿವಾನಂದ ಲಹರಿ' ಮತ್ತು 'ಭಜಗೋವಿಂದಂ' ಮುಂತಾದ ಹಲವು ಸ್ತೋತ್ರಗಳ ಮೂಲಕ ಸಾರಿದರು.

**3. ಅದ್ವೈತ ಸಿದ್ಧಾಂತದ ಸಾರ: ಅಹಂ ಬ್ರಹ್ಮಾಸ್ಮಿ** ಶಂಕರರ ದರ್ಶನದ ಮೂಲಮಂತ್ರ "ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ". ಅಂದರೆ, ಬ್ರಹ್ಮವೊಂದೇ ಸತ್ಯ, ಈ ಜಗತ್ತು ಪರಿವರ್ತನಾಶೀಲವಾದ ಕಾರಣ ಅದು ಮಿಥ್ಯೆ (ಮಾಯೆ), ಮತ್ತು ಜೀವ ಹಾಗೂ ಬ್ರಹ್ಮ ಬೇರೆಯಲ್ಲ.

**ದಕ್ಷಿಣಾಮೂರ್ತಿ ಅಷ್ಟಕದ ಆಳವಾದ ವಿಶ್ಲೇಷಣೆ:** ಶಂಕರರ ಅದ್ವೈತದ ಸಾರವು ಅವರ 'ದಕ್ಷಿಣಾಮೂರ್ತಿ ಅಷ್ಟಕ'ದಲ್ಲಿ ಅಡಗಿದೆ. ಇಲ್ಲಿ ಶಿವನನ್ನು ಜ್ಞಾನದ ಗುರುವನ್ನಾಗಿ ಚಿತ್ರಿಸಲಾಗಿದೆ.

- **ಮೌನ ವ್ಯಾಖ್ಯಾನ:** "ಗುರೋಸ್ತು ಮೌನಂ ವ್ಯಾಖ್ಯಾನಂ ಶಿಷ್ಯಸ್ತು ಛಿನ್ನಸಂಶಯಾಃ" – ಸತ್ಯವು ಮಾತುಗಳಿಗೆ ನಿಲುಕದ್ದು, ಅದು ಅನುಭವಕ್ಕೆ ಬರಬೇಕಾದದ್ದು ಎಂಬುದನ್ನು ಮೌನದ ಮೂಲಕ ಗುರುಗಳು ಬೋಧಿಸುತ್ತಾರೆ.
- **ದರ್ಪಣ ದೃಶ್ಯಮಾನ:** ಕನ್ನಡಿಯೊಳಗೆ ನಗರವು ಹೇಗೆ ಪ್ರತಿಬಿಂಬವಾಗಿ ಕಾಣುತ್ತದೋ, ಹಾಗೆಯೇ ಈ ಜಗತ್ತು ಆತ್ಮದೊಳಗೆ ಮಾಯೆಯಿಂದ ಕಾಣುತ್ತದೆ ಎಂಬ ಅದ್ವೈತ ತತ್ವವನ್ನು ಇಲ್ಲಿ ಎಂಟು ಶ್ಲೋಕಗಳಲ್ಲಿ ಅಡಕಗೊಳಿಸಲಾಗಿದೆ.

**4. ಸಾಂಸ್ಕೃತಿಕ ರಾಷ್ಟ್ರೀಯತೆ ಮತ್ತು ಅಖಂಡ ಭಾರತ**
**ಶಂಕರಾಚಾರ್ಯರನ್ನು ಭಾರತದ ಸಾಂಸ್ಕೃತಿಕ ಏಕೀಕರಣದ ಪಿತಾಮಹ ಎಂದು ಕರೆಯಬಹುದು. ಇಂದಿನ ರಾಜಕೀಯ ರಾಷ್ಟ್ರೀಯತೆಗಿಂತ ಭಿನ್ನವಾಗಿ,** ಅವರು 'ಸಾಂಸ್ಕೃತಿಕ ರಾಷ್ಟ್ರೀಯತೆ'ಯನ್ನು (Cultural Nationalism) ಪ್ರತಿಪಾದಿಸಿದರು.

- ಆಮ್ನಾಯ ಮಠಗಳ ಸ್ಥಾಪನೆ: ಭಾರತದ ನಾಲ್ಕು ದಿಕ್ಕುಗಳಲ್ಲಿ ಅವರು ಸ್ಥಾಪಿಸಿದ ಮಠಗಳು ರಾಷ್ಟ್ರದ ಸನಾತನ ಧರ್ಮದ ರಕ್ಷಕರಾಗಿ ಕಾರ್ಯನಿರ್ವಹಿಸುತ್ತಿವೆ.
- ದಕ್ಷಿಣದಲ್ಲಿ ಶೃಂಗೇರಿ ಶಾರದಾ ಪೀಠ (ಯಜುರ್ವೇದ)
- ಪೂರ್ವದಲ್ಲಿ ಪುರಿ ಗೋವರ್ಧನ ಪೀಠ (ಋಗ್ವೇದ)
- ಪಶ್ಚಿಮದಲ್ಲಿ ದ್ವಾರಕಾ ಕಾಳಿಕಾ ಪೀಠ (ಸಾಮವೇದ)
- ಉತ್ತರದಲ್ಲಿ ಬದರಿನಾಥ ಜ್ಯೋತಿರ್ಮಠ (ಅಥರ್ವಣ ವೇದ)
- ದಿಗ್ವಿಜಯ ಮತ್ತು ಸಂಪ್ರದಾಯ: ನರ್ಮದಾ ತೀರದಿಂದ ಕಾಶ್ಮೀರದವರೆಗೆ ಪಾದಯಾತ್ರೆ ಮಾಡಿದ ಶಂಕರರು , ದೇಶದ ವಿಭಿನ್ನ ಭಾಗಗಳ ಜನರ ನಡುವೆ ಆಧ್ಯಾತ್ಮಿಕ ಸಂಬಂಧವನ್ನು ಕಲ್ಪಿಸಿದರು. ಉತ್ತರದ ಅರ್ಚಕರು ದಕ್ಷಿಣದವರು ಮತ್ತು ದಕ್ಷಿಣದ ಪ್ರಮುಖ ಕ್ಷೇತ್ರಗಳಲ್ಲಿ ಉತ್ತರದವರ ಸೇವೆ ಇರಬೇಕು ಎಂಬಂತಹ ನಿಯಮಗಳ ಮೂಲಕ ಪ್ರಾದೇಶಿಕ ಭೇದಗಳನ್ನು ಅಳಿಸಿ ಹಾಕಿದರು.

**5. ಸಾಮಾಜಿಕ ಸಮಾನತೆ ಮತ್ತು ವಿಶ್ವಮಾನವ ಪ್ರಜ್ಞೆ: ಶಂಕರರು ಜಾತಿ, ಮತ, ಲಿಂಗ ಮತ್ತು ವರ್ಗದ ಚೌಕಟ್ಟುಗಳನ್ನು ಮೀರಿ ನಿಂತವರು.**

- ಮನಿಷಾ ಪಂಚಕಂ ಮತ್ತು ಚಾಂಡಾಲ: ವಾರಣಾಸಿಯಲ್ಲಿ ಚಾಂಡಾಲನೊಬ್ಬನ ರೂಪದಲ್ಲಿ ಬಂದ ಶಿವನು "ದೂರ ಸರಿ" ಎಂದ ಶಂಕರರಿಗೆ "ನನ್ನ ದೇಹವೋ ಅಥವಾ ಆತ್ಮವೋ ಯಾವುದನ್ನು ದೂರ ಸರಿಯಲು ಹೇಳುತ್ತಿದ್ದೀಯ?" ಎಂದು ಕೇಳುತ್ತಾನೆ. ಆಗ ಶಂಕರರಿಗೆ ಅರಿವಾಗುತ್ತದೆ – ಜ್ಞಾನಿಯಾದವನು ಯಾವ ಜಾತಿಯಲ್ಲಿ ಹುಟ್ಟಿದರೂ ಆತನೇ ಗುರು. ಈ ಘಟನೆಯ ಫಲವೇ 'ಮನಿಷಾ ಪಂಚಕಂ'.
- ಕನಕಧಾರಾ ಸ್ತೋತ್ರದ ಸಾಮಾಜಿಕ ಸಂದೇಶ: ಬಡ ಬ್ರಾಹ್ಮಣ ಮಹಿಳೆಯ ಮನೆಯಲ್ಲಿ ಚಿನ್ನದ ನೆಲ್ಲಿಕಾಯಿಗಳ ಮಳೆ ಸುರಿಸುವಂತೆ ಪ್ರಾರ್ಥಿಸಿದ ಶಂಕರರು, ಆಧ್ಯಾತ್ಮಿಕತೆಯು ಸಮಾಜದ ಕಡುಬಡವರ ಹಸಿವು ಮತ್ತು ಕಷ್ಟಗಳಿಗೆ ಸ್ಪಂದಿಸಬೇಕು ಎಂಬ ದೊಡ್ಡ ಸಂದೇಶ ನೀಡಿದರು.
- ನರ್ಮದಾ ಸ್ತೋತ್ರ: ಪ್ರಕೃತಿಯನ್ನು ದೈವಿಕವಾಗಿ ಕಾಣುವ ಅವರು 'ನರ್ಮದಾಷ್ಟಕಂ' ಮೂಲಕ ನದಿಗಳ ಸಂರಕ್ಷಣೆ ಮತ್ತು ಪಾವಿತ್ರ್ಯತೆಯನ್ನು ಸಾರಿದರು.

**6. ಅದ್ವೈತ ಮತ್ತು ಆಧುನಿಕ ವಿಜ್ಞಾನ (Quantum Physics):**
**ಶಂಕರರ ತತ್ವಗಳು ಇಂದಿನ ಕ್ವಾಂಟಮ್ ಭೌತಶಾಸ್ತ್ರಕ್ಕೆ ಅತ್ಯಂತ ಹತ್ತಿರವಾಗಿವೆ.**

- ಏಕೀಕೃತ ಕ್ಷೇತ್ರ (ಗಟಿಜಿಜಜ ಈಜಟಜ): ಐನ್?ಸ್ಟೈನ್ ಮತ್ತು ಶ್ರೋಡಿಂಜರ್ ಅಂತಹ ವಿಜ್ಞಾನಿಗಳು ಕಂಡುಕೊಳ್ಳಲು ಬಯಸಿದ ವಿಶ್ವದ ಮೂಲ ಶಕ್ತಿ ಶಂಕರರ 'ಬ್ರಹ್ಮನ್' ಹೊರತಾಗಿ ಬೇರೇನೂ ಅಲ್ಲ.
- ಅಬ್ಸರ್ವರ್ ಎಫೆಕ್ಟ್: ಕ್ವಾಂಟಮ್ ಫಿಸಿಕ್ಸ್‌ನಲ್ಲಿ ವೀಕ್ಷಕನು ವಸ್ತುವನ್ನು ನೋಡುವವರೆಗೂ ಅದರ ಅಸ್ತಿತ್ವ ಅನಿಶ್ಚಿತ ಎಂಬ ವಾದವು ಶಂಕರರ 'ದೃಕ್-ದೃಶ್ಯ ವಿವೇಕ'ಕ್ಕೆ ಪೂರಕವಾಗಿದೆ.
- ಮಾಯಾ ಮತ್ತು ಶಕ್ತಿ: ದ್ರವ್ಯವು (Matter) ಕೇವಲ ಒಂದು ಭ್ರಮೆ ಅಥವಾ ಶಕ್ತಿಯ ರೂಪ ಎಂಬ ವಿಜ್ಞಾನದ ಮಾತು ಶಂಕರರ 'ಮಾಯಾ' ವಾದದ ಆಧುನಿಕ ರೂಪವಾಗಿದೆ.

7. ಜಾಗತಿಕ ಪ್ರಭಾವ ಮತ್ತು ಭಾರತ ಸರ್ಕಾರದ ಗೌರವ :
ಶಂಕರಾಚಾರ್ಯರ ಪ್ರಭಾವ ಕೇವಲ ಭಾರತಕ್ಕೆ ಸೀಮಿತವಾಗಿಲ್ಲ.

- ಪಾಶ್ಚಾತ್ಯ ಜಗತ್ತು: ಎಮರ್ಸನ್, ಥೋರೋ ಮತ್ತು ಸ್ಕಾಪೆನ್ಹೌರ್ ಅಂತಹ ಪಾಶ್ಚಾತ್ಯ ದಾರ್ಶನಿಕರು ಅದ್ವೈತದಿಂದ ಪ್ರಭಾವಿತರಾಗಿದ್ದರು. ಇಂದು ಅಮೇರಿಕಾ ಮತ್ತು ಯುರೋಪ್‌ನ ಅನೇಕ ಜ್ಞಾನದ ಕೇಂದ್ರಗಳಲ್ಲಿ 'ನಾನ್-ಡ್ಯುಯಲಿಸಂ' ಹೆಸರಿನಲ್ಲಿ ಶಂಕರರ ತತ್ವಗಳನ್ನು ಅಧ್ಯಯನ ಮಾಡಲಾಗುತ್ತಿದೆ.
- ಏಕಾತ್ಮ ಧಾಮ: ಭಾರತ ಸರ್ಕಾರವು ಮಧ್ಯಪ್ರದೇಶದ ಓಂಕಾರೇಶ್ವರದಲ್ಲಿ 108 ಅಡಿ ಎತ್ತರದ 'ಏಕಾತ್ಮ ಪ್ರತಿಮೆ'ಯನ್ನು (Statue of Oneness) ಸ್ಥಾಪಿಸಿ ಅವರಿಗೆ ಗೌರವ ಸಲ್ಲಿಸಿದೆ.
- ಕೇದಾರನಾಥ ಪುನರುತ್ಥಾನ: ಹಿಮಾಲಯದ ಕೇದಾರನಾಥದಲ್ಲಿ ಶಂಕರರ ಪ್ರತಿಮೆ ಮತ್ತು ಸಮಾಧಿಯನ್ನು ಪುನರ್ನಿರ್ಮಿಸುವ ಮೂಲಕ ಸರ್ಕಾರವು ಶಂಕರರ ರಾಷ್ಟ್ರೀಯ ಪ್ರಸಾರವನ್ನು ಸ್ಮರಿಸುತ್ತಿದೆ.

**8. ಇಂದಿನ ಕಾಲಕ್ಕೆ ಶಂಕರರ ಪ್ರಸ್ತುತತೆ**
ಇಂದಿನ ವಿಭಜಿತ ಜಗತ್ತಿಗೆ ಶಂಕರರು ಹೇಗೆ ಉತ್ತರವಾಗುತ್ತಾರೆ?

1. ವೈಯಕ್ತಿಕ ಶಾಂತಿ: "ನಾನು ಶಾಶ್ವತ ಚೈತನ್ಯ" ಎಂಬ ಅರಿವು ಮಾನಸಿಕ ಒತ್ತಡವನ್ನು ಹೋಗಲಾಡಿಸುತ್ತದೆ.
2. ಏಕತೆ: ಸಂಘರ್ಷಗಳನ್ನು ಹೋಗಲಾಡಿಸಿ ಎಲ್ಲರಲ್ಲೂ ಇರುವ ದೈವತ್ವವನ್ನು ಕಾಣುವ ಶಂಕರರ ದೃಷ್ಟಿಕೋನವು ವಿಶ್ವಶಾಂತಿಗೆ ಅವಶ್ಯಕ.
3. ತಾರ್ಕಿಕ ಧರ್ಮ: ಕುರುಡು ನಂಬಿಕೆಗಿಂತ ವಿವೇಚನೆ ಮತ್ತು ತರ್ಕಕ್ಕೆ ಪ್ರಾಮುಖ್ಯತೆ ನೀಡುವ ಅವರ ಹಾದಿಯು ವಿಜ್ಞಾನ ಯುಗದ ಯುವಜನತೆಗೆ ಪ್ರೇರಣೆ.

ಶಂಕರರ ತತ್ವದ ಅಭಿಯಾನ ಮತ್ತು ಸ್ತೋತ್ರಗಳ ಪ್ರಚಾರ : ಶೃಂಗೇರಿ ಶಾರದಾ ಪೀಠ ಮತ್ತು ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠಗಳು ರಾಷ್ಟ್ರದ ಮೂಲೆ ಮೂಲೆಯಲ್ಲೂ ಶಂಕರ ತತ್ವ ಮತ್ತು ಸ್ತೋತ್ರ ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ವಿಶಿಷ್ಟವಾದ ಕಾರ್ಯಗಳನ್ನು ಮಾಡುತ್ತಿವೆ. ಸ್ತೋತ್ರ ಅಭಿಯಾನಗಳ ಮೂಲಕ ಶಂಕರರ ಸ್ತೋತ್ರ ಸಾಹಿತ್ಯವನ್ನು ಪ್ರಚುರಪಡಿಸುತ್ತಿರುವುದು ಇಂದಿನ ತಲೆಮಾರನ್ನು ಭಕ್ತಿ ಮಾರ್ಗಕ್ಕೆ ಸೆಳೆಯಲು ಮುಖ್ಯ ಕಾರಣವಾಗಿದೆ.

ಆದಿ ಶಂಕರಾಚಾರ್ಯರು ಸ್ಥಾಪಿಸಿದ ಮೊತ್ತಮೊದಲ ಮಠವಾಗಿ ಶೃಂಗೇರಿಯು 'ಅದ್ವೈತ' ತತ್ವದ ಕೇಂದ್ರಬಿಂದುವಾಗಿದೆ. ಪ್ರಸ್ತುತ ಜಗದ್ಗುರುಗಳಾದ ಮಹಾ ಸನ್ನಿಧಾನಂ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಮತ್ತು ಸನ್ನಿಧಾನಂ ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ಪ್ರತಿವರ್ಷ 'ವಿದ್ವತ್ ಗೋಷ್ಠಿ'ಗಳು ನಡೆಯುತ್ತವೆ. ಮತ್ತು ಇಲ್ಲಿ ಅತ್ಯಂತ ಕ್ಲಿಷ್ಟವಾದ ಭಾಷ್ಯಗಳ ಮೇಲೆ ಚರ್ಚೆಗಳು ನಡೆಯುವ ಮೂಲಕ ತತ್ವದ ಶುದ್ಧತೆಯನ್ನು ಕಾಪಾಡಲಾಗುತ್ತಿದೆ.

* ಸ್ತೋತ್ರ ಪ್ರಸಾರ ಮತ್ತು ವೇದಾಂತ ಶಿಬಿರ : ಶೃಂಗೇರಿ ಮಠವು ಶಂಕರರ ಸ್ತೋತ್ರಗಳನ್ನು ಸರಿಯಾದ ಉಚ್ಚಾರಣೆಯೊಂದಿಗೆ ಕಲಿಯಲು ಲಕ್ಷಾಂತರ ಜನರಿಗೆ ಆನ್‌ಲೈನ್ ಮತ್ತು ಆಫ್‌ಲೈನ್ ತರಗತಿಗಳನ್ನು ಆಯೋಜಿಸುತ್ತದೆ. ನಾಡಿನಾದ್ಯಂತ ವೇದಾಂತ ಶಿಬಿರಗಳನ್ನು ನಡೆಸಲಾಗುತ್ತದೆ .

ಯಡತೊರೆ ಮಠದ ಸ್ತೋತ್ರ ಅಭಿಯಾನಗಳು :
ಕೃಷ್ಣರಾಜನಗರದ (ಏಖ ನಗರ) ಯಡತೊರೆಯಲ್ಲಿರುವ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠವು ಶಂಕರ ತತ್ವವನ್ನು ಕಲೆಯ ಮೂಲಕ ಜನಪ್ರಿಯಗೊಳಿಸುವಲ್ಲಿ ಕ್ರಾಂತಿಕಾರಿ ಹೆಜ್ಜೆ ಇಟ್ಟಿದೆ.

* ಶ್ರೀ ಶಂಕರಭಾರತಿ ಸ್ವಾಮಿಗಳ ನೇತೃತ್ವ: ಯಡತೊರೆ ಮಠದ ಪೀಠಾಧಿಪತಿಗಳಾದ ಶ್ರೀ ಶಂಕರಭಾರತಿ ಮಹಾಸ್ವಾಮಿಗಳು ಶಂಕರ ಸ್ತೋತ್ರ ಸಾಹಿತ್ಯವನ್ನು ಭಾರತದ ಉದ್ದಗಲಕ್ಕೂ ಪ್ರಚರಿಸುತ್ತಿದ್ದಾರೆ . ಇದು ಶ್ರೀ ಶಂಕರ ಭಾರತಿ ಮಹಾ ಸ್ವಾಮಿಗಳ ಅತ್ಯಂತ ವಿಶಿಷ್ಟ ಪ್ರಯತ್ನ. ಶಂಕರರ ಗಹನವಾದ ಸ್ತೋತ್ರಗಳಾದ ದಕ್ಷಿಣಾಮೂರ್ತಿ ಅಷ್ಟಕ, ಸೌಂದರ್ಯ ಲಹರಿ , ಮುಂತಾದ ಸ್ತೋತ್ರಗಳ ಪ್ರತಿಯೊಂದು ಪದದ ಅರ್ಥ ಮತ್ತು ಅದ್ವೈತದ ಆಂತರ್ಯವನ್ನು ವಿವರಿಸುತ್ತಾರೆ, ಇದು ಶ್ರೋತ್ರಗಳಿಗೆ ಸ್ತೋತ್ರದ ಅರ್ಥವನ್ನು ಕಣ್ಣಿಗೆ ಕಟ್ಟುವಂತೆ ಮಾಡುತ್ತದೆ.
* ಸಂಗೀತದ ಮೂಲಕ ಸ್ತೋತ್ರ : ಮಠವು ಶಂಕರರ ಅನೇಕ ಸ್ತೋತ್ರಗಳನ್ನು ಸುಶ್ರಾವ್ಯವಾದ ರಾಗಗಳಿಗೆ ಅಳವಡಿಸಿ, ಸಿಡಿ ಮತ್ತು ಡಿಜಿಟಲ್ ಮಾಧ್ಯಮಗಳ ಮೂಲಕ ಹೊರತಂದಿದೆ. ಇದು ಮನೆಮನೆಗಳಲ್ಲಿ ಸ್ತೋತ್ರ ಪಠಣವಾಗಲು ಪ್ರೇರಣೆಯಾಗಿದೆ.
* ಗುರು ಪರಂಪರೆಯ ಗೌರವ: ಅದ್ವೈತ ಮಠಗಳು 'ಶಂಕರ ಜಯಂತಿ'ಯನ್ನು ಉತ್ಸವದಂತೆ ಆಚರಿಸುವ ಮೂಲಕ ಯುವ ಜನತೆಗೆ ಶಂಕರರ ಅದ್ವೈತ ತತ್ವವನ್ನು ಪರಿಚಯ ಮಾಡುತ್ತಿವೆ.
* ಜನಸಾಮಾನ್ಯರಿಗೆ ವೇದಾಂತ: ಮೊದಲು ವೇದಾಂತವು ಕೇವಲ ಪಂಡಿತರ ಚರ್ಚೆಯ ವಿಷಯವಾಗಿತ್ತು. ಆದರೆ ಶೃಂಗೇರಿಯ 'ಜ್ಞಾನ ಯಜ್ಞ'ಗಳು ಮತ್ತು ಯಡತೊರೆಯ 'ಸ್ತೋತ್ರ ಮಾಧ್ಯಮ'ಗಳು ಅದ್ವೈತವನ್ನು ಸಾಮಾನ್ಯ ಜನರ ದೈನಂದಿನ ಜೀವನದ ಭಾಗವನ್ನಾಗಿ ಮಾಡಿವೆ.
* ಸ್ತೋತ್ರಗಳ ಪ್ರಾಯೋಗಿಕ ಅನ್ವಯ: ಸ್ತೋತ್ರ ಕೇವಲ ಪಠಣಕ್ಕಲ್ಲ, ಅದು ಜೀವನದ ದರ್ಶನ ಎಂಬುದನ್ನು ಈ ಮಠಗಳು ಕಲಿಸುತ್ತಿವೆ. ಒಟ್ಟಾರೆಯಾಗಿ, ಶೃಂಗೇರಿಯು ತತ್ವದ 'ಶಾಸ್ತ್ರೀಯ ತಳಹದಿ'ಯನ್ನು ಗಟ್ಟಿಗೊಳಿಸಿದರೆ, ಯಡತೊರೆಯ ಮಠವು ಶಂಕರ ಸ್ತೋತ್ರಗಳನ್ನು ಜನಮನಕ್ಕೆ ತಲುಪುವಂತೆ ಮಾಡುತ್ತಿದೆ. ಈ ಎರಡೂ ಮಠಗಳ ಪ್ರಯತ್ನದಿಂದಾಗಿ ಆದಿ ಶಂಕರರ ಅದ್ವೈತ ತತ್ವವು ಇಂದಿನ ಆಧುನಿಕ ಯುಗದಲ್ಲೂ ಅತ್ಯಂತ ಪ್ರಸ್ತುತವಾಗಿ ಉಳಿದಿದೆ.

ಜಗದ್ಗುರು ಆದಿ ಶಂಕರಾಚಾರ್ಯರು, ಪ್ರತಿಕ್ಷಣವೂ ನಮ್ಮ ಪ್ರಜ್ಞೆಯಲ್ಲಿ ಹರಿಯುವ ಜ್ಞಾನದ ದೀಪ . ಅವರು ಕಟ್ಟಿದ ಸಾಂಸ್ಕೃತಿಕ ಭಾರತದ ಭದ್ರ ಬುನಾದಿಯ ಮೇಲೆ ನಾವು ಇಂದು ಹೆಮ್ಮೆಯಿಂದ ನಿಂತಿದ್ದೇವೆ. ಶಂಕರ ಜಯಂತಿಯ ಈ ಶುಭ ಸಂದರ್ಭದಲ್ಲಿ, ಅವರ 'ಅದ್ವೈತ'ದ ಹಾದಿಯಲ್ಲಿ ಸಾಗುತ್ತಾ, ಎಲ್ಲರನ್ನೂ ಸಮಾನವಾಗಿ ಕಾಣುವ 'ವಿಶ್ವಮಾನವ' ಪ್ರಜ್ಞೆಯನ್ನು ನಾವೆಲ್ಲರೂ ಬೆಳೆಸಿಕೊಳ್ಳೋಣ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# "ನೆನಪಿರಲಿ ಈ ಮೂರು ಸಂಗತಿಗಳು"



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 01

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯುವ ಪೀಳಿಗೆಗೆ ಯಶಸ್ಸು ಎನ್ನುವುದು ಗುರಿಯಾಗಿದೆ. ಆದರೆ ಆ ಯಶಸ್ಸನ್ನು ಹೇಗೆ ನಿರ್ವಹಿಸಬೇಕು ಎಂಬುದು ಅಷ್ಟೇ ಮುಖ್ಯ. ಈ ಕೆಳಗಿನ ಮೂರು ಅಂಶಗಳು ನಿಮ್ಮ ಬದುಕಿನ ದಿಕ್ಸೂಚಿಯಾಗಲಿ.

ನಿಮ್ಮಲ್ಲಿರುವ ಕಲೆ, ಬುದ್ಧಿವಂತಿಕೆ ಅಥವಾ ಕೌಶಲಗಳು ನೀವು ಹುಟ್ಟುತ್ತಲೇ ತಂದ ಉಡುಗೊರೆಗಳು. ಇದನ್ನು ಗಾಡ್ ಗಿಫ್ಟ್ ಎನ್ನಬಹುದು. ಇದರ ಬಗ್ಗೆ ಹೆಮ್ಮೆಯಿರಲಿ, ಆದರೆ ಇದು ನಾನೇ ಸೃಷ್ಟಿಸಿಕೊಂಡಿದ್ದು ಎಂಬ ಭ್ರಮೆ ಬೇಡ. ಆ ಶಕ್ತಿಯನ್ನು ನೀಡಿದ ದೈವತ್ವಕ್ಕೆ ಸದಾ ಕೃತಜ್ಞರಾಗಿರಿ.

ಸಮಾಜ, ನಿಮ್ಮ ಗೆಳೆಯರು ಮತ್ತು ಹಿರಿಯರು ನಿಮ್ಮನ್ನು ಗುರುತಿಸಿ ಬೆನ್ನು ತಟ್ಟಿದಾಗ ನಿಮಗೆ ಖ್ಯಾತಿ ಲಭಿಸುತ್ತದೆ. ಜನರಿಲ್ಲದೆ ಜನಪ್ರಿಯತೆ ಇಲ್ಲ. ಆದ್ದರಿಂದ ನಿಮ್ಮನ್ನು ಬೆಳೆಸಿದ ಸಮಾಜಕ್ಕೆ ಸದಾ ಆಭಾರಿಯಾಗಿರಿ.

ಪ್ರತಿಭೆ ಮತ್ತು ಖ್ಯಾತಿಯ ನಡುವೆ ನಾವು ಬೆಳೆಸಿಕೊಳ್ಳುವ ಅಹಂಕಾರ ನಮ್ಮನ್ನು ನಾಶ ಮಾಡಬಲ್ಲದು. ವರ್ತನೆ ಎಂಬುದು ನಾವು ಆರಿಸಿಕೊಳ್ಳುವ ದಾರಿ. ಇಲ್ಲಿ ಎಚ್ಚರ ತಪ್ಪಿದರೆ ಸರ್ವನಾಶ ಕಾಯಂ.

ಒಬ್ಬ ಪ್ರಸಿದ್ಧ ಶಿಲ್ಪಿ ಇದ್ದ. ಅವನು ಕೆತ್ತಿದ ವಿಗ್ರಹಗಳು ಜೀವಂತ ಕಲೆಯಂತೆ ಕಾಣುತ್ತಿದ್ದವು. ಜನರು ಅವನ ಕಲೆಯನ್ನು ನೋಡಿ ಇವನು ದೇವರಿಗಿಂತ ಕಡಿಮೆ ಇಲ್ಲ ಎಂದು ಹೊಗಳುತ್ತಿದ್ದರು. ಇದರಿಂದ ಶಿಲ್ಪಿಗೆ ಅಹಂಕಾರ ನೆತ್ತಿಗೇರಿತು. ತಾನು ಎಲ್ಲರಿಗಿಂತ ಶ್ರೇಷ್ಠ ಎಂದು ವರ್ತಿಸಲು ಶುರುಮಾಡಿದ.

ಒಮ್ಮೆ ಅವನಿಗೆ ತಾನು ಸಾಯುವ ಸಮಯ ಹತ್ತಿರ ಬಂದಿದೆ ಎಂದು ತಿಳಿಯಿತು. ಯಮನನ್ನು ತಪ್ಪಿಸಲು ಅವನು ತನ್ನಂತೆಯೇ ಇರುವ ಹತ್ತು ಸುಂದರ ವಿಗ್ರಹಗಳನ್ನು ತಯಾರಿಸಿ, ಅವುಗಳ ನಡುವೆ ತಾನೂ ಅಡಗಿಕೊಂಡು ಕುಳಿತ.

ಯಮಧರ್ಮರಾಜ ಬಂದ, ಹತ್ತು ವಿಗ್ರಹಗಳನ್ನು ನೋಡಿ ಬೆರಗಾದ. ಅಸಲಿ ಶಿಲ್ಪಿ ಯಾರು ಎಂದು ತಿಳಿಯುವುದು ಅಸಾಧ್ಯವಾಗಿತ್ತು.

ಆಗ ಯಮ ಒಂದು ಉಪಾಯ ಮಾಡಿದ. ಮೆಲ್ಲನೆ ಹೇಳಿದ, ಎಂತಹ ಅದ್ಭುತ ವಿಗ್ರಹಗಳು! ಆದರೆ ಇವುಗಳನ್ನು ಕೆತ್ತಿದ ಶಿಲ್ಪಿ ಒಂದು ಸಣ್ಣ ತಪ್ಪು ಮಾಡಿದ್ದಾನೆ. ಇದನ್ನು ಕೇಳಿದ ಶಿಲ್ಪಿಗೆ ತನ್ನ ಪ್ರತಿಭೆಯ ಬಗ್ಗೆ ಇದ್ದ ಅಹಂಕಾರ ತಡೆಯಲಾಗಲಿಲ್ಲ. ತಕ್ಷಣ ಎದ್ದು ನಿಂತು, "ನಾನು ಕೆತ್ತಿದ ವಿಗ್ರಹದಲ್ಲಿ ತಪ್ಪು ಹುಡುಕುವವನು ನೀನ್ಯಾರು ಎಲ್ಲಿದೆ ತಪ್ಪು " ಎಂದು ಕಿರುಚಿದ.

ಯಮ ನಗುತ್ತಾ ಹೇಳಿದ,"ನಿನ್ನ ಅಹಂಕಾರವೇ ಆ ತಪ್ಪು! ಅದು ನಿನ್ನನ್ನು ಮೌನವಾಗಿ ಇರಲು ಬಿಡಲಿಲ್ಲ." ಯಮ ಅವನನ್ನು ಕರೆದುಕೊಂಡು ಹೋದ.

ಆ ಶಿಲ್ಪಿಗೆ ಪ್ರತಿಭೆ ಇತ್ತು (ದೇವರ ಕೃಪೆ), ಖ್ಯಾತಿಯೂ ಇತ್ತು (ಜನರ ಮೆಚ್ಚುಗೆ). ಆದರೆ ಅವನ ಕೆಟ್ಟ ವರ್ತನೆ ಮತ್ತು ಅಹಂಕಾರ ಅವನನ್ನು ಸಾವಿನ ದವಡೆಗೆ ದೂಡಿತು.

ಯುವ ಸ್ನೇಹಿತರೇ,ನಿಮ್ಮ ಪ್ರತಿಭೆ ನಿಮಗೆ ರೆಕ್ಕೆಗಳನ್ನು ನೀಡಬಹುದು, ಜನರು ನಿಮ್ಮನ್ನು ಆಕಾಶಕ್ಕೆ ಎತ್ತಬಹುದು. ಆದರೆ ನಿಮ್ಮ ನಡವಳಿಕೆ ಚೆನ್ನಾಗಿಲ್ಲದಿದ್ದರೆ ಆ ಎತ್ತರದಿಂದ ಬೀಳಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಆದ್ದರಿಂದ ವಿನಯವಂತರಾಗಿರಿ, ಯಶಸ್ಸು ನಿಮ್ಮ ಪಾದದಡಿಯೇ ಇರುತ್ತದೆ.

